ಸಂಸ್ಕೃತ–ಸಂಸ್ಕೃತಿಗೆ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಕೊಡುಗೆ ಒಂದು ಅಧ್ಯಯನ

(ಅಂತಿಮ ಸಾರಲೇಖ)

ಅಧ್ಯಾಯ – 1

1. ಪ್ರಸ್ತಾವನೆ, 2. ಅಧ್ಯಯನದ ಉದ್ದೇಶ, 3. ಅಧ್ಯಯನದ ಮಹತ್ವ,

4. ಅಧ್ಯಯನದ ವ್ಯಾಪ್ತಿ, ಸ್ವರೂಪ ಮತ್ತು ವಿಧಾನ.

ಅಧ್ಯಾಯ – 2

1. ಸಂಸ್ಕೃತ ಪೂರ್ವಾನ್ವೇಷಣೆ:
2. ಸಂಸ್ಕೃತಿಯ ಹಿನ್ನೋಟ:
3. ಸಂಸ್ಕೃತ ಮತ್ತು ಸಂಸ್ಕೃತಿಗಳ ಸಮನ್ವಯ.

ಅಧ್ಯಾಯ – 3

1. ಶ್ರೀ ಆದಿಚುಂಚನಗಿರಿ ಮಠದ ಪ್ರಾಚೀನ ಇತಿಹಾಸ ಮತ್ತು ಪರಂಪರೆ:
2. ಪ್ರಾಚೀನ ಹಾಗೂ ಪೌರಾಣಿಕ ದೃಷ್ಟಿಕೋನದಲ್ಲಿ ಚುಂಚನಗಿರಿ.
3. ಜನಪದೀಯರ ದೃಷ್ಟಿಯಲ್ಲಿ ಚುಂಚನಗಿರಿ:
4. ಐತಿಹಾಸಿಕ ಸಮೀಕ್ಷೆಯಲ್ಲಿ ಆದಿಚುಂಚನಗಿರಿ.
5. ನಾಥ ಪಂಥದ ಪೂರ್ವಾನ್ವೇಷಣೆ–ಆದಿಚುಂಚನಗಿರಿ ಗುರು ಪರಂಪರೆ:
6. ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಜೀವನ ಚರಿತ್ರೆ.
7. ದೀಕ್ಷಾಬದ್ಧ ಶಿಷ್ಯಪರಂಪರೆ ಹಾಗೂ ಶಾಖಾ ಮಠಗಳ ಸ್ಥಾಪನೆ:

ಅಧ್ಯಾಯ – 4

1. ಸಂಸ್ಕೃತ ಕ್ಷೇತ್ರಕ್ಕೆ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಕೊಡುಗೆಗಳು:
2. ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ–ಆಗಮ ಮಹಾವಿದ್ಯಾಲಯ.
3. ಆಗಮ ಪ್ರಯೋಗಶಾಲೆ ಹಾಗೂ ಅಪೂರ್ವ ಗ್ರಂಥಾಲಯ.
4. ಶ್ರೀಮಠದ ಸಂಸ್ಕೃತ ಪಾಠಶಾಲೆಗಳು, ಕಾಲೇಜು.

ಅಧ್ಯಾಯ – 5

1. ಸಾಂಸ್ಕೃತಿಕ ಕ್ಷೇತ್ರಕ್ಕೆ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಕೊಡುಗೆಗಳು:
2. ಧಾರ್ಮಿಕ ಕ್ಷೇತ್ರಕ್ಕೆ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಕೊಡುಗೆಗಳು:
3. ಶೈಕ್ಷಣಿಕ ಕ್ಷೇತ್ರಕ್ಕೆ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಕೊಡುಗೆಗಳು:
4. ಸಾಮಾಜಿಕ ಕ್ಷೇತ್ರಕ್ಕೆ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಕೊಡುಗೆಗಳು:

ಉಪಸಂಹಾರ

1. ಫಲಿತಗಳು.

ಅನುಬಂಧ –1 1. ಪರಾಮರ್ಶನ ಗ್ರಂಥಗಳು.

ಅನುಬಂಧ –2 1. ಛಾಯಾ ಚಿತ್ರಗಳು.

ಸಂಸ್ಕೃತ–ಸಂಸ್ಕೃತಿಗೆ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಕೊಡುಗೆ ಒಂದು ಅಧ್ಯಯನ

ಅಧ್ಯಾಯ–1

ಪ್ರಸ್ತಾವನೆ:

ಮನುಷ್ಯನಿಗೆ ಹುಟ್ಟಿನಿಂದಲೇ ಭಾಷೆ, ಸಂಸ್ಕಾರ, ನಡೆ–ನುಡಿ, ರೀತಿ–ನೀತಿ, ಆಚಾರ–ವಿಚಾರ ಆಚರಣೆಯ ಮೂಲಕ ಮಾನವೀಯ ಮಹಾಮೌಲ್ಯಗಳನ್ನು ತಂದೆ–ತಾಯಿ ಗುರುಗಳು ನೀಡುತ್ತಾ ಬಂದಿದ್ದಾರೆ. ಈ ಎಲ್ಲಾ ಸಂಸ್ಕಾರಗಳು ಹಿಂದೆ ಗುರುಕುಲ ಪದ್ಧತಿಯಲ್ಲಿ ಕಾಣಬಹುದಿತ್ತು. ಆದರೆ ಅದೇ ಸಂಸ್ಕಾರಗಳು ಇಂದು ಆಧುನಿಕ ಭರಾಟೆಯಲ್ಲಿ ನಮ್ಮ ಸಂಸ್ಕೃತಿಯ ರೂಪವನ್ನು ತಾಳಿದವು. ಮಾತ್ರವಲ್ಲ ಅವು ವಿಕೃತಿಯ ಘನಘೋರ ಸ್ವರೂಪ ತಾಳಿವೆ. ಈ ಅಪಾಯಗಳನ್ನು ತಪ್ಪಿಸುವಂತಾಗಬೇಕಾದರೆ ಮಠ, ಮಂದಿರ, ಧಾರ್ಮಿಕ ಶ್ರದ್ಧಾ ಕೇಂದ್ರಗಳು, ಸಾಧು ಸಂತರು, ಮಹಾತ್ಮರು, ದಾರ್ಶನಿಕರು ಇವರುಗಳ ಮಾರ್ಗದರ್ಶನ ಮತ್ತು ಸಂಸರ್ಗದಿಂದ ಅದು ಸಾಧ್ಯವಾಗುತ್ತದೆ. ಸನ್ಮಾರ್ಗವನ್ನು ಬೋಧಿಸುವಂತಹ ಅನೇಕ ಶ್ರದ್ಧಾ ಕೇಂದ್ರಗಳು ನಶಿಸಿ ಹೋಗಿವೆ. ಅಳಿದು ಉಳಿದಿರುವಂತಹ ಕೆಲವು ದೇವಾಲಯ ಮಠ, ಮಂದಿರಗಳು ಹಾಗೆಯೇ ಇವೆ. ಇವುಗಳ ಪಾವಿತ್ರ್ಯತೆ ಹಾಗೂ ಮಾಹಾತ್ಮೆಯನ್ನು ಪುನರುಜ್ಜೀವನಗೊಳಿಸಿ ವಾಸ್ತವಾಂಶದ ಮೇಲೆ ಬೆಳಕು ಚೆಲ್ಲಿದ್ದೇ ಆದರೆ ದೇಶದ ಸಂಸ್ಕೃತಿಯ ಮೌಲ್ಯ ಹೆಚ್ಚಿಸಿದಂತಾಗುತ್ತದೆ. ಆ ನಿಟ್ಟಿನಲ್ಲಿ 'ಸಂಸ್ಕೃತ–ಸಂಸ್ಕೃತಿಗೆ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಕೊಡುಗೆ ಒಂದು ಅಧ್ಯಯನ' ವಿಷಯವಾಗಿ ಈ ಮಹಾಪ್ರಬಂಧವನ್ನು ಮಂಡಿಸಲಾಗುತ್ತಿದೆ.

ಶ್ರೀಮಠ ಸರ್ವತೋಮುಖ ಅಭಿವೃದ್ಧಿಯನ್ನು ಕಾಣಲು ಕಾರಣೀಪುರುಷರಾದ ಶ್ರೀಗಳು ಧಾರ್ಮಿಕವಾಗಿ, ಅಧ್ಯಾತ್ಮಿಕವಾಗಿ ಅದನ್ನು ಬೆಳೆಸಿದರು. ನಾಥಪರಂಪರೆ ಹಿನ್ನೆಲೆ ಹೊಂದಿರುವ ಶ್ರೀಮಠದ ಪ್ರಾಚೀನ ಇತಿಹಾಸವನ್ನು ಜಾನಪದೀಯ, ಐತಿಹಾಸಿಕ ದೃಷ್ಟಿಯಲ್ಲಿ ಅವಲೋಕಿಸಿ ವಿಮರ್ಶಿಸಿದಾಗ ಎಂಟನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಆದಿಚುಂಚನಗಿರಿ ಮಠ ಪ್ರಾಶಸ್ತ್ಯ ಪಡೆದಿತ್ತು ಎಂಬುದು ತಿಳಿದು ಬರುತ್ತದೆ. ಇದರ ಸವಿಸ್ತಾರದ ವಿಷಯ ಸೂಚಿಗಳನ್ನು ವಿಮರ್ಶಿಸಿ ವಿಶ್ಲೇಷಿಸುವ ಅಗತ್ಯವಿರುತ್ತದೆ. ಆ ದೃಷ್ಟಿಯಿಂದ ಈ ಮಹಾ ಪ್ರಬಂಧವನ್ನು ಮಂಡಿಸಲಾಗಿದೆ.

ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಅಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ಪರಮಪೂಜ್ಯ ಸ್ವಾಮೀಜಿ ಅವರು ನೀಡಿದ ಕೊಡುಗೆಗಳು ಸಾರ್ವಕಾಲಿಕವಾಗಿ ಇರುವಂತಾದ್ದು. ಕಲೆ, ಸಾಹಿತ್ಯ, ನಾಟಕ, ಜನಪದ, ಸಾಂಸ್ಕೃತಿಕ ಮೇಳ ಮೊದಲ್ಗೊಂಡು ಗೋಶಾಲೆ, ವೃದ್ಧಾಶ್ರಮ ಮುಂತಾದ ಜನಪರ ಕಾರ್ಯಗಳ ಬಗೆಗಿನ ಮಹತ್ವವನ್ನು ತಿಳಿಸುವ ಗುರಿಯನ್ನು ಈ ಅಧ್ಯಯನ ಹೊಂದಿದೆ. ಶ್ರೀಗಳ ಕೊಡುಗೆ ಹಾಗೂ ಶ್ರೀಮಠದ ಹಿನ್ನೆಲೆ ಮತ್ತು ಮುನ್ನಡೆಗಳನ್ನು ಈ ಮಹಾಪ್ರಬಂಧದ ಅಧ್ಯಯನ ಒಳಗೊಂಡಿದೆ.

ಈ ಪ್ರಬಂಧದ ಅಧ್ಯಯನವು ಶೈಕ್ಷಣಿಕ ಅಗತ್ಯದ ನೆಲೆಯಿಂದ ಮಹತ್ವದ್ದಾಗಿದೆ. ಸಾಹಿತ್ಯ ಹಾಗೂ ಚರಿತ್ರೆಯ ವಿದ್ಯಾರ್ಥಿಗಳಿಗೆ ಪೂಜ್ಯ ಮಹಾಸ್ವಾಮೀಜಿ ಅವರು ನಡೆಸಿದ ಸಾಮಾಜಿಕ ಆದರ್ಶವನ್ನು ನಿರೂಪಿಸುವುದರ

ಜೊತೆಗೆ ದೇಶದ ಸಾಂಸ್ಕೃತಿಕ ನೆಲೆಯನ್ನು ತಿಳಿದುಕೊಳ್ಳುವುದಕ್ಕೆ ಈ ಅಧ್ಯಯನ ಮಹತ್ವದ್ದಾಗಿದೆ ಮತ್ತು ತುಂಬಾ ಸಹಕಾರಿಯಾಗಬಲ್ಲದು. ಆದಿಚುಂಚನಗಿರಿಯ ಪ್ರಾಚೀನ ಇತಿಹಾಸ ಹಾಗೂ ಪೂಜ್ಯ ಶ್ರೀಗಳು ಮೂರು ಮುಕ್ಕಾಲು ದಶಕದಲ್ಲಿ ಮಾಡಿದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಅಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಸಾಧನೆಗಳನ್ನು ಅಧ್ಯಯನ ವ್ಯಾಪ್ತಿಯಾಗಿಸಿಕೊಂಡು ಚಾರಿತ್ರಿಕ ನೆಲೆಯ ಅಧ್ಯಯನ ವಿಧಾನವನ್ನು ಒಳಗೊಂಡಿದೆ.

ಅಧ್ಯಾಯ–2

ಸಂಸ್ಕೃತ ಮತ್ತು ಸಂಸ್ಕೃತಿಯ ಪೂರ್ವಾನ್ವೇಷಣೆ:

ಸಂಸ್ಕೃತ ಭಾಷೆ ಜಗತ್ತಿನ ಅತ್ಯಂತ ಪ್ರಾಚೀನ, ಸಮೃದ್ಧ ನಿತ್ಯನೂತನವಾಗಿ ಸದಾ ಸನಾತನ ಧರ್ಮವಾಹಿನಿಯಾಗಿ ಹರಿಯುವ ಗಂಗೆಯಾಗಿದೆ. ವಿಶ್ವದ ಬೇರೆಲ್ಲ ಭಾಷೆಗಳಿಗಿಂತ ಪ್ರಭಾವಕಾರಿಯೂ, ಸಂಪದ್ಭರಿತವೂ ಆಗಿದೆ. ಮಾತ್ರವಲ್ಲ ಆತ್ಮಕಲ್ಯಾಣವನ್ನು ಬಯಸುವ ಎಲ್ಲರಿಗೂ ಇದು ಸ್ವಾತ್ಮೋದ್ಧಾರದ ಮಾರ್ಗವನ್ನು ದರ್ಶಿಸುವ ಜ್ಞಾನದ ಕಣಜವಾಗಿದೆ. ಇದೊಂದು 'ಜ್ಞಾನ ನಿಧಿ'! ಯಾರು ಎಷ್ಟು ಬೇಕಾದರೂ ಪಡೆಯಬಹುದಾದ ಜ್ಞಾನ ಆಗರವೇ ಸರಿ. ವ್ಯಕ್ತಿಯನ್ನು ಪರಿಪಕ್ವ ಮಾಡಿ ಶುದ್ಧೀಕರಿಸಿ, ಸಂಸ್ಕರಿಸಲ್ಪಡುವ ಸಮಗ್ರ ಶಕ್ತಿ ಹೊಂದಿದೆ ಎಂದರೆ ಅದು 'ಸಂಸ್ಕೃತ' ಭಾಷೆಯಾಗಿದೆ. ಆದ್ದರಿಂದ ಅಂದಿನಿಂದ ಇಂದಿನವರೆಗೂ ಸಂಸ್ಕೃತ ಭಾಷೆಯು ವಿನಾಶವಾಗದೆ, ವಿಕಾರಗೊಳ್ಳದೆ ಜೀವಂತವಾಗಿ ಉಳಿದಿರುವುದು, ಬಳಕೆಯಲ್ಲಿರುವುದು ರಾಷ್ಟ್ರದ ಪುಣ್ಯ ವಿಶೇಷವಾಗಿದೆ. ಈ ಭಾಷೆಯು ಯಾವುದೇ ಒಂದು ವರ್ಗ, ಒಂದು ಪ್ರದೇಶದ ಭಾಷೆಯಲ್ಲ. ಸ್ವದೇಶಿಯರು ವಿದೇಶಿಯರೆನ್ನದೆ ತನ್ನ ಬಾಹುಳ್ಯದ ಪ್ರಭೆಯನ್ನು ವಿಶ್ವದೆಲ್ಲೆಡೆ ಪಸರಿಸಿದೆ.

"ಸಂಸ್ಕೃತಿಯೆಂಬುದು ಪಾಂಡಿತ್ಯ ಮಾತ್ರವಲ್ಲ. ಒಬ್ಬ ಮನುಷ್ಯ ಹತ್ತು ಭಾಷೆಗಳನ್ನು ಕಲಿತಿರಬಹುದು. ನೂರು ಗ್ರಂಥಗಳನ್ನು ಓದಿರಬಹುದು, ವ್ಯಾಕರಣ ನಿಘಂಟುಗಳನ್ನು ಕರತಲಾಮಲಕ ಮಾಡಿಕೊಂಡಿರಬಹುದು; ಅಷ್ಟರಿಂದಲೇ ಅವನು 'ಸಂಸ್ಕೃತ' ಪುರುಷನೆನಿಸಲಾರ."[4] ಎಲ್ಲಾ ಬಲ್ಲವನಾಗಿದ್ದರೂ ಸಾತ್ವಿಕ ಸಂಸ್ಕಾರ ಲಕ್ಷಣವಿಲ್ಲವಾದರೆ ಅವನು ಅಸಂಸ್ಕೃತ ನಾಗರೀಕನಾಗಿರುತ್ತಾನೆ. ಯಾರು ಶುದ್ಧಭಾಷೆಯೊಂದಿಗೆ ಸುಸಂಸ್ಕೃತನಾಗುವನೋ ಅವನೇ ಸಂಸ್ಕೃತ ಪಂಡಿತನಾಗಬಲ್ಲ. ಆದ್ದರಿಂದ ವ್ಯಕ್ತಿ ಭಾಷೆಯ ಅರಿವಿನೊಂದಿಗೆ ಸಂಸ್ಕೃತಿ–ಸಂಸ್ಕೃತದ ವಿವೇಚನಾಶೀಲನಾಗಿರಬೇಕೆಂಬುದನ್ನು ಭಾಷೆಯು ಅನಾವರಣಗೊಳಿಸುತ್ತದೆ.

ಜನರು ಅಲೆಮಾರಿತನವನ್ನು ಬಿಟ್ಟು ಒಂದು ಪ್ರದೇಶದಲ್ಲಿ ನೆಲೆನಿಂತು ಮೂಲಭೂತ ಅವಶ್ಯಕತೆಗಾಗಿ ಆಹಾರ ಧಾನ್ಯಗಳನ್ನು ಬಿತ್ತಿ ಬೆಳೆಯುವ ನಿಟ್ಟಿನಲ್ಲಿ ಮಣ್ಣಿನ ಮಕ್ಕಳಾಗಿ ಮಣ್ಣಿನ ಸಂಸ್ಕೃತಿಯನ್ನು, ಶ್ರಮಸಂಸ್ಕೃತಿಯನ್ನಾಗಿಸಿಕೊಂಡು ಕೃಷಿ ಬದುಕನ್ನು ಆರಂಭಿಸಿದ ಮೇಲೆ ಪ್ರಕೃತಿಯೊಂದಿಗೆ ಸಂಬಂಧವನ್ನು ಅನನ್ಯವಾಗಿ ಬೆಳೆಸಿಕೊಂಡು ತಮ್ಮ ಭಯ, ಸಂಕಟ, ಸಂತೋಷವನ್ನೆಲ್ಲಾ ಪ್ರಕೃತಿಯ ಜೊತೆ ಬೆಸೆಯುತ್ತಾ ಬದಲಾವಣೆ ಕಾಣಲು ತೊಡಗಿದರು. ಮಾನವ ಹಾಗೂ ಪ್ರಕೃತಿಯ ನಿಗೂಢ ಸಂಬಂಧಗಳು ಆರಾಧನೆಯಾಗಿ ಪರಿವರ್ತನೆಗೊಂಡವು. ಈ ತಾತ್ವಿಕ ನಿಲುವುಗಳೇ ದೇವರು, ದೈವ, ನಂಬಿಕೆ, ಶ್ರದ್ಧೆ, ಆಚಾರ, ವಿಚಾರಗಳು ಅವುಗಳಿಗೆ ಮೂಲಭೂತವಾದ ಸಂಗತಿಗಳಾದವು. ಇದರಿಂದ ಬದುಕಿನ ವಿಧಾನಪರ್ವವನ್ನು ಕಂಡುಕೊಂಡರು. ಈ ರೀತಿಯಲ್ಲಿ ಹುಟ್ಟಿಕೊಂಡ ಬದುಕಿನ ಸಂಕೇತವೇ ಸಂಸ್ಕೃತಿ ಎಂದು ಕರೆಯಬಹುದು.

ಯಾವುದೇ ಭಾಷೆಯು ತನ್ನ ಅಸ್ತಿತ್ವವನ್ನು ತೋರ್ಪಡಿಸಬೇಕಾದರೆ ಅದರ ಸಂಸ್ಕೃತಿಯ ಕೈಗನ್ನಡಿಯಾಗಿರುತ್ತದೆ. ಹಾಗೆ ಸಂಸ್ಕೃತವು ಸಹ ತನ್ನ ಸಾರ್ವಭೌಮತ್ವನ್ನು ಭಾರತೀಯ ಸಂಸ್ಕೃತಿಯಾಗಿ ತೋರ್ಪಡಿಸುತ್ತದೆ. ಅಷ್ಟು ಮಾತ್ರವಲ್ಲ ತನ್ನದೇ ಆದ ವಿಭಿನ್ನ ವಿಶಿಷ್ಟ್ಯ ಪರಂಪರೆಯ ಚೌಕಟ್ಟಿನ ನಡಾವಳಿಗಳಿಂದ ನೋಡುಗರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಇದು ದೇಶದ ಸಾರ್ವಭೌಮತ್ವವನ್ನು ಹೆಚ್ಚಿಸಿದೆ. ಆದ್ದರಿಂದಲೇ 'ಸಂಸ್ಕೃತ ಮತ್ತು ಸಂಸ್ಕೃತಿ' ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಂಸ್ಕೃತದ ಭದ್ರಬುನಾದಿಯ ಮೇಲೆ ಸಂಸ್ಕೃತಿಯ ಭವ್ಯಸೌಧ ನೆಲೆಗೊಂಡಿದೆ.

ಅಧ್ಯಾಯ–3

ಆದಿಚುಂಚನಗಿರಿ ಮಠದ ಪ್ರಾಚೀನ ಇತಿಹಾಸ ಮತ್ತು ಪರಂಪರೆ:

ಭಾರತ ದೇಶದ ಧರ್ಮಭೂಮಿಯ ಕರ್ನಾಟಕ ರಾಜ್ಯ, ಮೈಸೂರು ಸೀಮೆಯ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನಲ್ಲಿ ಶ್ರೀ ಆದಿಚುಂಚನಗಿರಿ ಕ್ಷೇತ್ರ ಇದೆ. ಇದು ನಾಥಪರಂಪರೆಯ ಧರ್ಮಪೀಠವಾಗಿದೆ. ಎಪ್ಪತ್ತೊಂದು ಸಿದ್ಧಯೋಗಿಗಳು ಈ ಪೀಠವನ್ನಾಳಿದ್ದಾರೆ. ಸರಿಸುಮಾರು ಎರಡು ಸಾವಿರ ವರ್ಷದ ಇತಿಹಾಸ ಇರುವ ಪೀಠವಿದು. ಇದು ಬಹು ಪ್ರಾಚೀನ ಪರಂಪರೆಯನ್ನೊಳಗೊಂಡಿದೆ. ಶ್ರೀ ಗಂಗಾಧರೇಶ್ವರಸ್ವಾಮಿ ಪ್ರಧಾನ ದೇವತೆಯಾದರೆ ಶ್ರೀ ಕಾಲಭೈರವೇಶ್ವರ ಕ್ಷೇತ್ರಾದಿ ದೇವತೆ. ಇಲ್ಲಿ ಭೈರವ ತತ್ತ್ವವೇ ಎಲ್ಲಾ ತತ್ತ್ವಗಳ ಮೂಲ. ಆದ್ದರಿಂದ ಶ್ರೀ ಆದಿಚುಂಚನಗಿರಿಯ ಭೈರವ ಪಂಥವು ಆರ್ಯರ ಸಂಸ್ಕೃತ, ತಾತ್ತ್ವಿಕ ಪಂಥಗಳಿಗಿಂತ ಚಾರಿತ್ರಿಕವಾಗಿಯೂ, ತಾತ್ತ್ವಿಕವಾಗಿಯೂ ಪುರಾತನವಾದುದು ಎಂಬುದಕ್ಕೆ 'ಶ್ರೀ ಆದಿಚುಂಚನಗಿರಿ' ಹೆಸರಿನ ಬಗ್ಗೆ ತುಲನಾತ್ಮಕವಾಗಿ ವಿಶ್ಲೇಷಿಸಿರುವ ವಿದ್ವಾಂಸರ ಅಭಿಪ್ರಾಯವನ್ನು ನೋಡಬಹುದಾಗಿದೆ. ಪುರಾಣ, ಪ್ರಾಚೀನ, ಇತಿಹಾಸ, ನಾಥಪರಂಪರೆ ಹಾಗೂ ಬಹು ಸಂಸ್ಕೃತಿಯನ್ನೊಳಗೊಂಡಿದೆ. ಶ್ರೀಮಠದ ಚರಿತ್ರೆಯನ್ನು ಮೂರು ವಿಭಾಗವಾಗಿ ವಿಂಗಡಿಸಬಹುದು. 1. ಪ್ರಾಚೀನಕಾಲ 2. ಮಧ್ಯಕಾಲೀನ 3. ಪುನರುಜ್ಜೀವನ ಹಾಗೂ ಆಧುನಿಕ ಕಾಲವಾಗಿ ವರ್ಗೀಕರಿಸಿ ತುಲನಾತ್ಮಕವಾಗಿ ವಿಶ್ಲೇಷಿಸಬಹುದಾಗಿದೆ.

1) ಪ್ರಾಚೀನ ಕಾಲದಲ್ಲಿ ನಾಥ ಪರಂಪರೆ ಇತಿಹಾಸ, ರಾಜ ಮಹಾರಾಜರು ಹಾಗೂ ಪಾಳೆಯಗಾರರು ಈ ಪಂಥದ ಬೆಳವಣಿಗೆಗಾಗಿ ನೀಡಿದ ಕೊಡುಗೆಗಳನ್ನು ಗಮನಿಸಬಹುದು.

2) ಮಧ್ಯಕಾಲೀನ ನಾಥ ಪರಂಪರೆಯಲ್ಲಿ 67 ಪೀಠಾಧ್ಯಕ್ಷರ ಕಾಲಮಾನ ಅವರ ಅನುಷ್ಠಾನಕ್ರಮ ಇತ್ಯಾದಿಗಳನ್ನು ಚರ್ಚಿಸಬಹುದು.

3) ಪುನರುಜ್ಜೀವನ ಹಾಗೂ ಆಧುನಿಕ ಕಾಲಘಟ್ಟದಲ್ಲಿ 68 ಪೀಠಾಧ್ಯಕ್ಷರ ಅವಧಿಯಲ್ಲಿ ಅಲ್ಪ ಪ್ರಗತಿಯನ್ನು ಗಮನಿಸಿದರೆ ಆಧುನಿಕ ಕಾಲದಲ್ಲಿ 71ನೇ ಸಿದ್ಧಯೋಗಿಗಳ ಸಾಧನೆ ಹೊಸ ಮನ್ವಂತರಕ್ಕೆ ನಾಂದಿಯಾದುದನ್ನು ಗಮನಿಸಬಹುದಾಗಿದೆ. ಈ ನೆಲೆಯಲ್ಲಿ ನನ್ನ ಸಂಶೋಧನೆ ಸಾಗಿದೆ. ನಾಥ ಪರಂಪರೆಯ ಧರ್ಮಪೀಠವಾದ ಶ್ರೀ ಆದಿಚುಂಚನಗಿರಿ ಮಠದಲ್ಲಿನ ಎಪ್ಪತ್ತೊಂದು ನಾಥ ಯೋಗಿಗಳು ಭೈರವನ ಆರಾಧಕರಾಗಿದ್ದಾರೆ. ಶ್ರೀ ಗಂಗಾಧರೇಶ್ವರ ಪ್ರಧಾನ ದೇವತೆಯಾಗಿ ಪಂಚಲಿಂಗ ರೂಪದಲ್ಲಿ, ಹಾಗೂ ಕ್ಷೇತ್ರಪಾಲಕನಾಗಿ ಕಾಲಭೈರವನ ಸಾನ್ನಿಧ್ಯವಿದೆ. ಇವರನ್ನು ಅನೂಚಾನವಾಗಿ ಆರಾಧಿಸಿಕೊಂಡು ಬಂದವರು ನಾಥಯೋಗಿಗಳು. ಆ ಸಿದ್ಧಯೋಗಿಗಳಿಂದ ಮಠ ಮತ್ತು ಭೈರವೇಶ್ವರ ದೇವಾಲಯವು ಸ್ಥಾಪಿಸಲ್ಪಟ್ಟಿದೆ ಎಂದು ಶೈವಪುರಾಣದಲ್ಲಿ ಉಲ್ಲೇಖಿತವಾಗಿದೆ.

ಪರಮೇಶ್ವರನು ಸಿದ್ಧಯೋಗಿಗೆ ತನ್ನ ಪೀಠವನ್ನು ಬಿಟ್ಟುಕೊಟ್ಟು ತಾನು ಪಂಚಲಿಂಗ ರೂಪದಲ್ಲಿ ಈ ಕ್ಷೇತ್ರದಲ್ಲಿ ನೆಲೆಸಿದ್ದರಿಂದ ಇದನ್ನು 'ದಕ್ಷಿಣ ಕಾಶಿ' ಯೆಂದೂ ಕರೆಯುತ್ತಾರೆ. ಸಾಕ್ಷಾತ್ ಈಶ್ವರನು ತಪಸ್ಸನ್ನಾಚರಿಸಿದ ಈ ಕ್ಷೇತ್ರ ತಪೋಭೂಮಿ ಆಗಿದೆ. ಅವನು ತಪಸ್ಸಿಗೆ ಕುಳಿತ ಜಾಗವನ್ನು 'ಜ್ವಾಲಾಪೀಠ', 'ಅಗ್ನಿಪೀಠ' ಹಾಗೂ 'ಉರಿಗದ್ದುಗೆ' ಎಂದು ಕರೆಯುತ್ತಾರೆ. ಈ ಪೀಠದಲ್ಲಿ ಆದಿರುದ್ರರಿಂದ ಹಿಡಿದು 'ಶ್ರೀಬಾಲಗಂಗಾಧರನಾಥ ಮಹಾಸ್ವಾಮೀಜಿಗಳವರೆಗೆ' 71 ನಾಥಸಂಪ್ರದಾಯದ ಸಿದ್ಧಯೋಗಿಗಳು ಕುಳಿತು ಧರ್ಮಪ್ರಚಾರ ಮಾಡಿ ಕಾಲೈಕ್ಯರಾಗಿದ್ದಾರೆ.

ಆದಿಚುಂಚನಗಿರಿ ಪುಣ್ಯಧಾಮದ ಅಂತರ್ಹಿತ ಅಧ್ಯಾತ್ಮಿಕ ಚುಂಬಕಶಕ್ತಿ ಪೂರ್ವಕಾಲದಿಂದಲೂ ಜನಪದರನ್ನೂ ಏಕಪ್ರಕಾರವಾಗಿ ಆಕರ್ಷಿಸುತ್ತಾ ಬಂದಿದೆ. ಕರ್ನಾಟಕದಲ್ಲಿ ಎಲ್ಲೆಲ್ಲಿ ಭೈರವ ನೆಲೆಗಳಿವೆಯೋ ಅಲ್ಲೆಲ್ಲಾ ಜನಪದ ಗೀತೆಗಳು ನಿರರ್ಗಳವಾಗಿ ಸಿಗುತ್ತವೆ. ಆ ನಿಟ್ಟಿನಲ್ಲಿ ಸಂಗ್ರಹಿಸುವ ಕಾರ್ಯಗಳು ನಿರಂತರ ಸಾಗುತ್ತಿವೆ. 69ನೇ ಪೀಠಾಧ್ಯಕ್ಷರಾದ "ಶ್ರೀಚಂದ್ರಶೇಖರನಾಥ ಸ್ವಾಮೀಜಿಯವರು ಶ್ರೀ ಆದಿಚುಂಚನಗಿರಿಯ ಜನಪದ ಗೀತೆಗಳು–1959 ಎಂಬ ಕೃತಿಯನ್ನು ಶ್ರೀ ಅ.ನ. ಕೃಷ್ಣರಾಯರು 'ಶ್ರೀ ಆದಿಚುಂಚನಗಿರಿ' ಎಂಬ ಹೆಸರಿನಲ್ಲಿ 1966ರಲ್ಲೇ ಸ್ವತಂತ್ರ ಸಂಗ್ರಹಗಳನ್ನು ಹೊರತಂದಿದ್ದಾರೆ. ಜೀ. ಶಂ. ಪರಮಶಿವಯ್ಯ, ಅರ್ಚಕ ಬಿ. ರಂಗಸ್ವಾಮಿ, ಎಚ್.ಎಲ್ ನಾಗೇಗೌಡ, ಮತಿಘಟ್ಟ ಕೃಷ್ಣಮೂರ್ತಿ, ಎಸ್.ಕೆ ಕರೀಂಖಾನ್, ಎಂ. ಎಸ್ ಗೋಪಾಲನ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪ್ರೊ. ಡಿ. ಲಿಂಗಯ್ಯ ಮೊದಲಾದವರ ಜನಪದ ಸಂಗ್ರಹಗಳಲ್ಲಿ ಚುಂಚನಗಿರಿ ಗೀತೆಗಳಿವೆ, ಭೈರವ ಗೀತೆಗಳಿವೆ, ಅವುಗಳ ಜೊತೆಗೆ 'ಸಿರಿ ಚುಂಚನಗಿರಿ' ಹೊಸ ಸೇರ್ಪಡೆ" [27] ಯಾಗಿದೆ.

ಆದಿಚುಂಚನಗಿರಿ ಕ್ಷೇತ್ರದ ಸಾಹಿತ್ಯ ಸಂಗ್ರಹಣೆಗೆ ಸಂಬಂಧಿಸಿದಂತೆ ಕರ್ನಾಟಕದ ಜಾನಪದ ವಿದ್ವಾಂಸರು ಶ್ರೇಷ್ಠ ಸಂಶೋಧಕರು ಹಾಗೂ ಸಂಗ್ರಾಹಕ, ಸಂಪಾದಕರೂ ಆದ ಡಾ. ಜೀ.ಶಂ.ಪರಮಶಿವಯ್ಯನವರು ಹಾಗೂ ಎಚ್.ಎಲ್.ನಾಗೇಗೌಡರ ಕೊಡುಗೆಯನ್ನು ಗಮನಿಸಲೇಬೇಕು. ಒಂದು ಸಾನ್ನಿಧ್ಯಕ್ಷೇತ್ರವು ತನ್ನ ಶ್ರೀಮಂತಿಕೆಯನ್ನು ಮೆರೆಯುವುದು ಸ್ಥಳೀಯ ಶಕ್ತಿ ಅನಾವರಣವಾಗುವುದು ಜನರ ಹೃನ್ಮನಗಳಲ್ಲಿ ನೆಲೆಸಿದಾಗ ಮಾತ್ರ ಸಾಧ್ಯವಾಗುತ್ತದೆ.ಜನಪದೀಯ ಜೀವಂತ ಆಧಾರಗಳನ್ನು ಅವಲೋಕಿಸಿದಾಗ ಚುಂಚನಗಿರಿಯ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮನಗಾಣಬಹುದು.

"ಚುಂಚನಗಿರಿಯ ಸುತ್ತಮುತ್ತಣ ಪ್ರದೇಶಕ್ಕೆ 'ವಿಕ್ರಮಚೋಳ ಮಂಡಲ' ಎಂಬ ಹೆಸರಿತ್ತೆಂದು ತಿಳಿದು ಬರುತ್ತದೆ. ಜೈನ ಮತ್ತು ಬೌದ್ಧ ಧರ್ಮಗಳ ಬದ್ದ ದ್ವೇಷಿಗಳಾಗಿದ್ದ ಚೋಳರು ಶೈವಧರ್ಮವನ್ನು ಬೆಂಬಲಿಸುವ ಭರದಲ್ಲಿ ಕಾಪಾಲಿಕರಿಗೆ ಆಶ್ರಯದಾತರಾಗಿದ್ದರು. ಚೋಳರು ಈ ಪ್ರದೇಶವನ್ನು ಆಳಿದ, ಈ ಮಠವನ್ನು ಬೆಂಬಲಿಸಿದ ಕುರುಹಾಗಿ ಗಿರಿಯ ಮೇಲಿರುವ ಚೋಳರ ಕಂಬ ಹಾಗೂ ಗಿರಿಗೆ ಸಮೀಪದಲ್ಲಿರುವ ಚೋಳೂರು ಸಾಕ್ಷಿ ನುಡಿಯುತ್ತದೆ." [45] ಈ ವಿಚಾರವು ಜನಪದ ಸಾಹಿತ್ಯದಲ್ಲಿ ಅನೇಕ ಸಂದರ್ಭಗಳಲ್ಲಿ ದಾಖಲಾಗಿರುವುದನ್ನು ಕಾಣಬಹುದಾಗಿದೆ. ಚೋಳರಾಜರ ಕಾಲಮಾನವನ್ನು ಗಮನಿಸಿದಾಗ "ಒಂದನೇ ಕುಲೋತ್ತುಂಗ ಚೋಳನ ನಂತರ ಅವನ ಮಗ ವಿಕ್ರಮ ಚೋಳ ಕ್ರಿ.ಶ. 1118–1135" [46] ರವರೆಗೆ ರಾಜ್ಯವನ್ನಾಳಿದ್ದಾರೆ. ಚುಂಚನಗಿರಿಯ ಜಾನಪದ ಸಾಹಿತ್ಯ ಹಾಗೂ ಚೋಳ ರಾಜರುಗಳ ಕೊಡುಗೆಯನ್ನು ಗಮನಿಸಿದಾಗ ಶ್ರೀ ಆದಿಚುಂಚನಗಿರಿ ಮಠವು ಕ್ರಿ.ಶ. 9ನೇ ಶತಮಾನಕ್ಕಿಂತ ಹಿಂದೆ ಇರಬಹುದು ಎಂದು ವೇದ್ಯವಾಗುತ್ತದೆ.

ನಾಥಪಂಥ ಬಹಳ ಪ್ರಾಚೀನವಾದದ್ದು ಮಾತ್ರವಲ್ಲ, ಭರತಖಂಡದಲ್ಲಿ ತನ್ನ ಬಾಹುಳ್ಯವನ್ನು ವಿಸ್ತರಿಸಿಕೊಂಡು ಸರ್ವಜನರನ್ನು ಜಾತಿ, ಮತ, ಭೇದವಿಲ್ಲದೆ, ಸರ್ವರನ್ನೂ ಒಪ್ಪಿ-ಅಪ್ಪಿಕೊಳ್ಳುವ ಸಂಸ್ಕೃತಿಯನ್ನು ಜಗತ್ತಿಗೆ ಸಾರಿದ ಪಂಥವಿದು. ಪ್ರಾರಂಭದಲ್ಲಿ ಅದ್ಭುತವಾಗಿ ಮೆರೆದ ನಾಥಪಂಥಕ್ಕೆ ಮಧ್ಯಕಾಲದಲ್ಲಿ ಹಲವು ಕಾರಣದಿಂದಾಗಿ ಸ್ವಲ್ಪ ಹಿನ್ನಡೆಯಾಯಿತು ಆದರೆ 8ರಿಂದ 10ನೇ ಶತಮಾನದಲ್ಲಿ ಅದೇ ಮತ್ತೆ ಗರಿಗೆದರಿತು. ಈ ನಾಥಪಂಥವು ಉತ್ತರಭಾರತದಲ್ಲಿ ತನ್ನ ಪ್ರಭಾವದ ಅಸ್ತಿತ್ವವನ್ನು ಜನರ ಮೇಲೆ ಬೀರುವಲ್ಲಿ ಯಶಸ್ವಿಯಾಯಿತು. "ಜನಮನವನ್ನು ಸಂಸ್ಕಾರಗೊಳಿಸಿ ಜಾತಿ-ಧರ್ಮದ ಕಟ್ಟುಪಾಡುಗಳನ್ನು ಸಡಿಲಿಸಲು ಆದ ಅಖಿಲ ಭಾರತೀಯ ಸ್ವರೂಪದ ಕೊನೆಯ ಪ್ರಯತ್ನವೆಂದರೆ, ಮತ್ಸ್ಯೇಂದ್ರ-ಗೋರಖರಿಂದ ಪ್ರಾರಂಭವಾದ ಸಿದ್ಧ-ನಾಥ ಸಂಪ್ರದಾಯದ ಆಂದೋಲನವೇ, ಬೌದ್ಧ ಜೈನರಿಗಿಂತಲೂ ಇನ್ನಷ್ಟು ಬಹುಜನ ಸಮಾಜದ ಹತ್ತಿರಕ್ಕೆ ಹೋಗಿ ಅವರಲ್ಲಿ ಬೆರೆತು ಸಿದ್ಧರು, ಯೋಗಿಗಳು, ಯತಿಗಳು ಆಯಾ ಪ್ರಾದೇಶಿಕ ಭಾಷೆಯಲ್ಲಿ ಧರ್ಮಬೋಧನೆಗೆ ತೊಡಗಿದರು."[18] ಆದರೆ ದಕ್ಷಿಣ ಭಾರತದಲ್ಲಿ ಅದಕ್ಕೆ ಸ್ವಲ್ಪ ಹಿನ್ನಡೆಯಾಯಿತು. ಆ ಭಾಗದಲ್ಲಿ ಅದು ಹೆಚ್ಚು ಪ್ರಬುದ್ಧಮಾನಕ್ಕೆ ಬರಲಿಲ್ಲ.

ಕರ್ನಾಟಕದಲ್ಲಿ ಪ್ರಾಚೀನ ಪರಂಪರೆಯ 'ನಾಥ ಕೇಂದ್ರ' ಗಳನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಕೆಲವು ಉನ್ನತ ಹಾಗೂ ಅಭಿವೃದ್ಧಿಯತ್ತ ಸಾಗಿದ ಉಲ್ಲೇಖಗಳಿದ್ದರೆ ಕೆಲವು ಕ್ಷೀಣ ಸ್ಥಿತಿಯಲ್ಲಿ ಇರುವುದರಿಂದ ಅವುಗಳಲ್ಲಿ ಮುಖ್ಯವಾದವುಗಳು ಪುನರುತ್ಥಾನವಾಗಬೇಕಾಗಿದೆ.

1)ಮಂಗಳೂರು: ಕದರಿ, ಮುಂಡಾಣ, ಎಯ್ಯಾಡಿ, ವಿಟ್ಲ, ಮಣೇಲು, 2)ಉಡುಪಿ: ಸೂಡ, ಮಂದರ್ತಿ, ಹಲವೆರಿ, ಉದ್ಯಾವರ, ಕೋಟ, 3)ಚಿಕ್ಕಮಗಳೂರು: ದೇವರ ಮನೆ, ಮೂಡಿಗೆರೆ, ಆಲ್ದೂರ್, 4)ಶಿವಮೊಗ್ಗ: ಹೊಸೂರು, ಚಂದ್ರಗುತ್ತಿ, ಮಂಡಗದ್ದೆ, ಸಾಗರ, ಆಗುಂಬೆ, ತೀರ್ಥಹಳ್ಳಿ, ಜೋಗಿಹಳ್ಳಿ, ಕೊಡಚಾದ್ರಿ, 5)ಮೈಸೂರು: ಕಪ್ಪಡಿ (ಕೆ. ಆರ್. ನಗರ), 6)ಕೊಡಗು: ಮಡಿಕೇರಿ, 7)ಮಂಡ್ಯ: ಆದಿಚುಂಚನಗಿರಿ, 8)ಚಿತ್ರದುರ್ಗ: ಹಿರಿಯೂರು, ಜೋಗಿಹಟ್ಟಿ, ಮೊಳಕಾಲ್ಮೂರು, 9)ಧಾರಾವಾಡ: ಬೈರಿದೇವರ ಕೊಪ್ಪ, ಹುಬ್ಬಳ್ಳಿ, 10)ಬೆಳಗಾವಿ: ಡೊಂಗಾರ್‌ಗಾಂವ್, ಕರೋಳ್, ಬಾಗೇವಾಡಿ, ಸವದತ್ತಿ, 11)ಹೊರರಾಜ್ಯ: ಕೇರಳದ ಕಾಸರಗೋಡು, ಕಾಂಜಂಗಾಡ್ ಇತ್ಯಾದಿ.

ಈ ಮೇಲಿನ ಪ್ರದೇಶದಲ್ಲಿ ಇರುವ ನಾಥಪರಂಪರೆಯ ಕೇಂದ್ರಗಳು ಚಾರಿತ್ರಿಕ ನೆಲೆಯಿಂದ ಬಹು ಮುಖ್ಯವಾಗಿವೆ. ನಾಥಕೇಂದ್ರಗಳಲ್ಲಿ ಇರುವ ಮೂರ್ತಿ, ವೀರಗಲ್ಲು, ಶಾಸನ, ಆರಾಧನಾ ಸಮುದಾಯ ಹಾಗೂ ಆಚರಣೆಗಳು ನಾಥ ಪರಂಪರೆಯ ಮೀಮಾಂಸೆಯನ್ನೇ ಕನ್ನಡ ನೆಲೆಯ ಪ್ರಜ್ಞೆಯ ಭಾಗವಾಗಿ ರೂಪಿಸುತ್ತವೆ.

ಆದಿಚುಂಚನಗಿರಿ 'ಗುರುಪೀಠ' ಪರಂಪರೆಯಲ್ಲಿ ಗಮನಿಸಬೇಕಾದ ಅಂಶವೆಂದರೆ ಆದಿಚುಂಚನಗಿರಿ ಸಮಾಧಿಮಂಟಪದ ಕಂಬದ ಮೇಲೆ ಶಾಸನ 112 (IV ನಾಮಂ 63)ರಲ್ಲಿ

1. ಶ್ರೀ ಚುಂಚನಗಿರೀಕರಮನಾಥಸ್ವಾಮಿೂ

2.ಆಂಗೀರಸಸಂವತಸ್ರ ಕುರುಕ್ಷೇತ್ರ

3. ನಾಥಕೀ ಸೇವಾಮೇಹರನಾಥ ಗುರುಬಾಈ [32]

ಈ ಶಾಸನವು ನಾಥಯತಿಗಳು ಇದ್ದದ್ದನ್ನು ಸಾಕ್ಷೀಕರಿಸುತ್ತವೆ. ಆದಿಚುಂಚನಗಿರಿಯ ಈ ಪೀಠವನ್ನು ಎಪ್ಪತ್ತೊಂದು ಪೀಠಾಧ್ಯಕ್ಷರು ಆಳಿರುತ್ತಾರೆ. ಈ ಶಾಸನದಲ್ಲಿ ಗ್ರಾಹ್ಯವಾದ ಅಂಶವೆಂದರೆ ನಾಥಪರಂಪರೆಯ 3ನೇಯವರಾದ 'ಶ್ರೀ ಕರ್ಮನಾಥ'ರು ಮತ್ತು 49 ನೇಯ 'ಶ್ರೀ ಮೇಹರನಾಥ'ರು ಹಾಗೂ 60 ನೇಯ 'ಶ್ರೀ ಕುರುಕ್ಷೇತ್ರನಾಥ'ರ ಹೆಸರು ಉಲ್ಲೇಖಿತವಾಗಿದೆ. ಇಲ್ಲಿ ತಿಳಿದುಬರುವ ವಿಷಯವೆಂದರೆ ಆದಿಪೀಠದ 3ನೇ ನಾಥಯೋಗಿಗಳಾದ ಶ್ರೀ ಕರ್ಮನಾಥರ ಮಹಾಸಮಾಧಿಯು ಇಲ್ಲೇ ಇರುವುದನ್ನು ಅದು ಸಾಕ್ಷೀಕರಿಸುತ್ತದೆ. ಭಾಷೆಯನ್ನು ಗಮನಿಸಿದರೆ ಮೇಹರನಾಥರು ಮೆಹರವಾಡ ಗುಜರಾತಿನವರಾಗಿರಬಹುದು ಎಂದು ಗೋಚರಿಸುತ್ತದೆ. ಇದರಿಂದಾಗಿ ಇದು ಪ್ರಾಚೀನ ಗುರುಪೀಠ ಎಂಬುದಕ್ಕೆ ಸಾಕ್ಷಿಯಾಗಿದೆ.

ಮಹಾಸ್ವಾಮೀಜಿಗಳವರು ನಾಥಪಂಥಕ್ಕೆ ಹೊಸ ಆಯಾಮದೊಂದಿಗೆ ಮುನ್ನುಡಿಯನ್ನು ಬರೆದಿದ್ದಾರೆ. ಎಪ್ಪತ್ತು ಮಂದಿ ಪೀಠಾಧ್ಯಕ್ಷರು ತಮ್ಮ ಶಿಷ್ಯವರ್ಗವನ್ನು ಬೆಳೆಸಿಕೊಳ್ಳಲಿಲ್ಲ. ಆದರೆ ಪೂಜ್ಯ ಮಹಾಗುರೂಜಿ ಅವರು 42 ಮಂದಿಗೆ 'ನಾಥ' ಪರಂಪರೆಯ ದೀಕ್ಷೆಯನ್ನು ನೀಡಿ ಸಮಾಜ ಸೇವೆಗಾಗಿ ಸಮಾಜಕ್ಕೇ ದೊಡ್ಡ ಕೊಡುಗೆಯನ್ನೇ ನೀಡಿದ್ದಾರೆ.

ಶ್ರೀಮಠದ ಸಂಪ್ರದಾಯದಂತೆ ಶ್ರೀಮಠದ ಪೀಠಾಧಿಪತಿಗಳು ದೀಕ್ಷೆಯನ್ನು ನೀಡಿರುತ್ತಾರೆ. ಮಹಾಸ್ವಾಮೀಜಿಗಳು ದೀಕ್ಷಬದ್ಧ ಶಿಷ್ಯರಿಗೆ ಲೋಕಾನುಭವದ ಜೊತೆಜೊತೆಗೆ ಸಂಸ್ಕೃತ, ವೇದ, ಆಗಮ, ವೇದಾಂತವನ್ನು ಓದಿಸಿ ಆಧುನಿಕ ಕಾಲಕ್ಕನುಗುಣವಾಗಿ ಬೆಳೆಸಿ ಸಮಾಜ ಸೇವೆ ಮಾಡಲು ಒಂದೊಂದು ಜಿಲ್ಲೆಯ ಜವಾಬ್ದಾರಿಯನ್ನು ನೀಡಿರುತ್ತಾ ಎಲ್ಲಾ ಜಿಲ್ಲಾಕೇಂದ್ರದಲ್ಲೂ ಶಾಖಾಮಠವನ್ನು ಸ್ಥಾಪಿಸುವುದರ ಮೂಲಕ ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ನೀಡಿರುತ್ತಾರೆ.

ಅಧ್ಯಾಯ-4

ಸಂಸ್ಕೃತ ಸಾಹಿತ್ಯ ಕ್ಷೇತ್ರಕ್ಕೆ ಮಹಾಸ್ವಾಮೀಜಿ ಅವರ ಕೊಡುಗೆಗಳು:

ಭಾರತೀಯ ಭಾಷೆಗಳಲ್ಲಿ ಸಂಸ್ಕೃತಕ್ಕೆ ವಿಶೇಷವೂ ವಿಶಿಷ್ಟವೂ ಆದ ಪ್ರಮುಖ ಸ್ಥಾನವಿದೆ. ದೇವಭಾಷೆ, ಗೀರ್ವಾಣಿ ಭಾಷೆಯೆಂದು ಕರೆಯಲ್ಪಡುವ ಸಂಸ್ಕೃತ ಭಾಷೆಯ ಸಂವರ್ಧನೆಗೆ ಹಿನ್ನಡೆಯಾಗುತ್ತಿರುವ ಸಂಗತಿಗಳು ದಿನಂಪ್ರತಿ ನೋಡುತ್ತಲೇ ಇರುತ್ತೇವೆ. ಹಿನ್ನಡೆಗೆ ಕಾರಣಗಳನ್ನು ಪರಾಮರ್ಶಿಸಲು ಹೋಗುವ ಪ್ರಯತ್ನಗಳು ಸಾಗುತ್ತಿಲ್ಲ. ಸಂಸ್ಕೃತ-ಸಂಸ್ಕೃತಿಗೆ ಹಿನ್ನಡೆಯಾದರೆ ಜೀವನದ ಧ್ಯೇಯೋದ್ದೇಶಗಳಿಗೆ ಹಿನ್ನಡೆಯಾದಂತೆ. ಆ ನಿಟ್ಟಿನಲ್ಲಿ ಪೂಜ್ಯ ಜಗದ್ಗುರುಗಳಾದ ಶ್ರೀ ಡಾ ಬಾಲಗಂಗಾಧರನಾಥ ಮಹಾಸ್ವಾಮೀಜಿಗಳವರು ಸಂಸ್ಕೃತ ಪರಿಸರದ ಪುನರುಜ್ಜೀವನಗೊಳಿಸಲು ಹೊಸಕ್ರಾಂತಿಯನ್ನೇ ಮಾಡಿದ್ದಾರೆಂದರೆ ತಪ್ಪಾಗಲಾರದು.

ಸ್ವಯಂ ಪ್ರಜ್ಞೆ ಇಲ್ಲದ ಯಾವುದೇ ವ್ಯಕ್ತಿಗೆ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯವಾಗದು. ಸತ್ಪ್ರೇರಣೆ, ಸದ್ವಾಸನೆಗಳಿಂದ ಕೂಡಿ, ತನಗೂ ತನ್ನವರಿಗೂ ಸಮಾಜಕ್ಕೂ ದೇಶಕ್ಕೂ ಹಿತಸಾರ್ಥಕನಾಗಬೇಕೆಂದರೆ ಅದಕ್ಕೆ ಒಂದೇ ಸಾಧನಾಮಾರ್ಗವೆಂದರೆ 'ಸಂಸ್ಕೃತ ಶಿಕ್ಷಣ'ವನ್ನು ಕೊಡುವುದು ಕೇವಲ ಮಂತ್ರ, ಗುಡಿಪೂಜೆಗಳಿಗೆ ಸೀಮಿತವಾಗಬಾರದು. ಪ್ರತೀ ಗ್ರಾಮೀಣ ಪ್ರಾಂತ್ಯದವರು ಸಂಸ್ಕೃತವನ್ನು ಕಲಿಯುವಂತೆ ಆಗಬೇಕು ಎನ್ನುವ ಕನಸನ್ನು ಹೊತ್ತು ಆ ನಿಟ್ಟಿನಲ್ಲಿ ಅನೇಕಾನೇಕ ಕಾರ್ಯಸೂಚಿಗಳನ್ನು ರೂಪಿಸಿಕೊಂಡು ಹೋರಾಡುತ್ತ ಬಂದವರು ಶ್ರೀಗಳು. ಸಂಸ್ಕೃತದ ಮೇಲಿದ್ದ ಅಪಾರವಾದ ಕಾಳಜಿ, ಗೌರವದಿಂದ ಅನೇಕ ವಿದ್ವಾಂಸರನ್ನು

ತಮ್ಮ ಗರಡಿಯಲ್ಲಿ ಬೆಳೆಸಿ ಪೋಷಿಸುತ್ತಾ ಬಂದಿದ್ದಾರೆ. ಸ್ವತಃ ಸಂಸ್ಕೃತ ವಿದ್ವಾಂಸರಾದ ಶ್ರೀಶ್ರೀಶ್ರೀ ಗಳವರು ತಮ್ಮದೇ ಆದ ದಿವ್ಯ ಚಿಂತನಾಲಹರಿಯಿಂದ ಶಿಕ್ಷಕರಾಗಿ, ಉಪನ್ಯಾಸಕರಾಗಿ ಯುವ ಸಮುದಾಯಕ್ಕೆ ಸ್ಫೂರ್ತಿಯ ಚಿಲುಮೆಯಾಗಿ ಬೆಳೆದು ಬೆಳಗಿದ ನಿದರ್ಶನದೊಂದಿಗೆ ಇಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್(ರಿ) ಇದರ ವತಿಯಿಂದ ಸಮಾಜದ ಕಣ್ಮಣಿಗಳಾಗಿ ವಿಶ್ವಾದಾದ್ಯಂತ ಬೆಳೆದು ನಿಂತಿದ್ದಾರೆ.

ಸಂಸ್ಕೃತ ಮಹಾವಿದ್ಯಾಲಯದಲ್ಲಿ ಜಾತಿ, ಮತ, ಬೇಧವಿಲ್ಲದೆ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಊಟ, ವಸತಿ, ಪುಸ್ತಕ, ಶುಲ್ಕಗಳನ್ನು ಮಹಾಸ್ವಾಮೀಜಿಯವರೇ ನೀಡಿ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ವಿಶೇಷವೆಂದರೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾತ್ರವಲ್ಲ ನೆರೆರಾಜ್ಯಗಳಾದ ಆಂಧ್ರ, ತಮಿಳುನಾಡು ರಾಜ್ಯಗಳಿಂದಲೂ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಸಂಸ್ಕೃತ–ವೇದ–ಆಗಮವನ್ನು ಅಭ್ಯಾಸ ಮಾಡುತ್ತಿದ್ದಾರೆ. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಮಹಾಸ್ವಾಮೀಜಿಗಳವರು ಸಂಸ್ಕೃತ ವೇದ ಪಾಠಶಾಲೆಗಳನ್ನು ತೆರೆದು ವಿದ್ಯಾಭ್ಯಾಸವನ್ನು ನೀಡುತ್ತಿದ್ದಾರೆ. ಒಟ್ಟು 17 ಪಾಠಶಾಲೆಗಳು ಮತ್ತು 2 ಉನ್ನತ ಪದವಿ ಕಾಲೇಜುಗಳಲ್ಲಿ 5836 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಅಧ್ಯಾಯ–5

ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಕ್ಕೆ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಕೊಡುಗೆಗಳು:

ಒಂದು ಧರ್ಮ, ಸಂಸ್ಕೃತಿ, ಪರಂಪರೆ ಇತಿಹಾಸ ಹಾಗೂ ಸಾಹಿತ್ಯ ಲಲಿತಕಲೆಗಳು ಭಾರತದ ಅಧ್ಯಾತ್ಮಿಕ ಸಿದ್ಧಿಯ ಪ್ರತೀಕಗಳಾಗಿವೆ. ಪೂರ್ವಕಾಲದಿಂದಲೂ ಭಾರತೀಯ ಧರ್ಮ ಹಾಗೂ ಸಂಸ್ಕೃತಿಯ ಬೆಳವಣಿಗೆಗೆ ರಾಜ ಮಹಾರಾಜರ ಕೊಡುಗೆ ಅಮೂಲ್ಯವಾದದ್ದು. ಹಾಗೆಯೇ ರಾಜರಂತೆಯೇ ಮಠಮಾನ್ಯಗಳು ಸಾಧು ಸಂತರ ಸಂಸ್ಕೃತಿಯ ನೆಲೆಗಳನ್ನು ಸಂರಕ್ಷಿಸಿ, ವಿಸ್ತರಿಸಿ ಅದಕ್ಕೊಂದು ಸಂಸ್ಕಾರ ನೀಡಿದ್ದಾರೆ. ಕಲೆಗಳು ವರ್ಗ, ಜಾತಿ, ಮತ, ರಾಷ್ಟ್ರಗಳ ಸೊತ್ತಲ್ಲ. ಅವು ವಿಶ್ವದ ಮಹಾನಿಧಿ. ಅವುಗಳ ಪರಮ ಗುರಿ ಲೋಕಕಲ್ಯಾಣವೇ ವಿನಹ ಜಾತಿ, ಮತ, ವರ್ಗಗಳ ಕಲ್ಯಾಣವಲ್ಲವೆಂಬುದನ್ನು ಅರ್ಥೈಸಿಕೊಂಡಿರಬೇಕು. ಧರ್ಮ, ಸಾಮಾಜಿಕ ಮೌಲ್ಯ ಹಾಗೂ ಸಾಹಿತ್ಯದ ವಿವೇಚನೆಯನ್ನು ಚಲನಾಶೀಲವಾಗಿರಿಸುವಲ್ಲಿ ಮಠಗಳ ಪಾತ್ರ ಮಹತ್ವವಾದದ್ದು. ಭಾರತೀಯ ಮಠಗಳ ಪರಂಪರೆಯಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನವು ಪ್ರಾಚೀನ ಸಂಸ್ಕೃತಿಯ ತಾಣವಾಗಿ ಬೆಳೆದು ಪ್ರಸಿದ್ಧವಾಗಿದೆ.

1974ರಲ್ಲಿ ಪರಮ ಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರು ಪಟ್ಟಾಭಿಷಕ್ತರಾದರು. ನಂತರ ಕಾಲಮಾನದಲ್ಲಿ ಮಠವನ್ನು ಬೆಳೆಸುವ ಜೊತೆಯಲ್ಲಿ ಲೋಕ ಕಲ್ಯಾಣಕ್ಕಾಗಿ ಜಾತಿ, ಪಂಥ, ಧರ್ಮಗಳನ್ನು ಮೀರಿ ಶ್ರಮಿಸಿ ಹತ್ತು ಹಲವು ಯೋಜನೆಗಳನ್ನು ರೂಪಿಸಿ ಜನಸೇವೆ ಮಾಡಿ ಮಹಾಪುರುಷ ಎನಿಸಿಕೊಂಡರು. ಅವರ ಮೂರು ಮುಕ್ಕಾಲು ದಶಕದ ಕಾಲಮಿತಿಯೊಳಗೆ ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಉಂಟಾದ ಪ್ರಗತಿ ಅನನ್ಯ.

ಕ್ಷೇತ್ರದಲ್ಲಿ ವರ್ಷಂಪ್ರತಿ ನಡೆಯುವ ಜಾತ್ರೆ, ಶಿವರಾತ್ರಿ, ನವರಾತ್ರಿ, ಉತ್ಸವಗಳಲ್ಲಿ ಅನೇಕ ಭಕ್ತಾದಿಗಳು ಬಂದು ಸೇವೆಯನ್ನು ಸಲ್ಲಿಸುತ್ತಿದ್ದರು. ಆ ವೇಳೆ ಅನೇಕರು ಭೈರವನನ್ನು ಚುಂಚನಗಿರಿಮಠ, ಗುರುಗಳನ್ನು ಕುರಿತಾದ ಅನೇಕ ಜನಪದ ಗೀತೆಗಳನ್ನು ಹಾಡುತ್ತಿದ್ದರು. ನಂದಿಧ್ವಜ ಕುಣಿತ, ಕೋಲಾಟ, ಸೋಮನ ಕುಣಿತ ಮುಂತಾದವುಗಳನ್ನು ಭಕ್ತರು ಸ್ವಇಚ್ಛೆಯಿಂದ ಬಂದು ಕುಣಿದು ಹಾಡಿ ಸೇವೆ ಸಲ್ಲಿಸುತ್ತಿದ್ದರು. ಇದನ್ನೆಲ್ಲ ಗಮನಿಸಿದ ಶ್ರೀಗಳು ಇವುಗಳ ಸಂರಕ್ಷಣೆಯಾಗಬೇಕು. ಉತ್ತರೋತ್ತರವಾಗಿ ಬೆಳೆಸಬೇಕೆಂಬ ಇಚ್ಛೆಯಿಂದ ಅವರು ಪಟ್ಟಕ್ಕೆ ಬಂದು ಐದು ವರ್ಷದ ಬಳಿಕ ತಮ್ಮ ವಾರ್ಷಿಕ ಪಟ್ಟಾಭಿಷೇಕದ ನೆನಪಿಗೋಸ್ಕರ 'ಶ್ರೀ ಕಾಲಭೈರವೇಶ್ವರ ಜಾನಪದ ಮೇಳ'ವನ್ನು ಹುಟ್ಟು ಹಾಕಿದರು. ಇದು ಪ್ರತಿ ವರ್ಷ ಸೆಪ್ಟೆಂಬರ್ 23, 24, 25ರಂದು ಜರಗುತ್ತದೆ. 23ರಂದು ರಾಜ್ಯ ಮಟ್ಟದ ಜಾನಪದ ಮೇಳ ಉದ್ಘಾಟನೆ, 24ರಂದು ಹಲವು ಕ್ಷೇತ್ರಗಳಲ್ಲಿ ಸಾಧನೆಗೈದ ಮಹಾನೀಯರಿಗೆ 'ಚುಂಚ ಪ್ರಶಸ್ತಿ' ಪ್ರಧಾನ, 25ರಂದು ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಗಳವರ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ ಹಾಗೂ ಸಮಾರೋಪ ಸಮಾರಂಭಗಳು ಅಸಂಖ್ಯಾತ ಕಲಾವಿದರ ಸಮಕ್ಷಮದಲ್ಲಿ ಇಂದಿಗೂ ವಿಜೃಂಭಣೆಯಿಂದ ಜರಗುತ್ತಿವೆ. ಶ್ರೀ ಮಠವನ್ನು ಧಾರ್ಮಿಕ ಶ್ರದ್ಧಾ ಕೇಂದ್ರವಾಗಿ ಬೆಳೆಸಿದರಲ್ಲದೆ ಕೆಳಸಮುದಾಯದವರಿಗೂ ದೈವಿಕ ಪ್ರಜ್ಞೆಯೊಂದಿಗೆ ಸಂಸ್ಕಾರವನ್ನು ರೂಪಿಸಲು ಗುರುಕುಲ ಶಿಕ್ಷಣ ಪದ್ಧತಿ, ಧಾರ್ಮಿಕ ಆಚರಣೆಗಳು, ಅಧ್ಯಾತ್ಮಿಕ ಬೋಧನೆ, ಸಂಸ್ಕೃತಅಧ್ಯಯನ, ಸಂಸ್ಕಾರಜಾಗೃತಿಶಿಬಿರಗಳು, ದೇವಾಲಯಗಳ ನಿರ್ಮಾಣ, ಕೆರೆಕಟ್ಟೆಗಳ ಅಭಿವೃದ್ಧಿ, ಧರ್ಮ ಸಮ್ಮೇಳನಗಳ ಮೂಲಕ ಧಾರ್ಮಿಕ ಅಭಿವೃದ್ಧಿಯನ್ನು ಜನಸಾಮಾನ್ಯರಿಗೆ ತಲುಪಿಸಿದ ಶ್ರೀಗಳ ಕೊಡುಗೆ ಅಪಾರವಾದದ್ದು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ 71ನೇಯ ಜಗದ್ಗುರುಗಳಾಗಿ ಪ್ರಮಾಧಿ ಸಂವತ್ಸರದಲ್ಲಿ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ಬಾಲಗಂಗಾಧರನಾಥಮಹಾಸ್ವಾಮಿಗಳು ಪೀಠಾಭಿಷಕ್ತರಾಗಿ ತಮ್ಮ 34ನೇ ಸಂವತ್ಸರದ ಹಾಗೂ 64ನೇ ಜನ್ಮದಿನೋತ್ಸವದ ಶುಭಾರಂಭದಲ್ಲಿ ಅಸೇತು ಹಿಮಾಚಲ ಪರ್ಯಂತ ಇರುವ ಸಮಸ್ತ ಯತಿಶ್ರೇಷ್ಠರು, ಭಕ್ತಜನರ ಸಮ್ಮುಖದಲ್ಲಿ ಲೋಕಕಲ್ಯಾಣಕ್ಕಾಗಿ ತಮ್ಮ ಅಮೃತಹಸ್ತದಿಂದ ಲೋಕಾರ್ಪಣೆಗೈದರು.' ಈ ಶಾಸನವು ದೇವಸ್ಥಾನಕ್ಕೆ ಬರುವ ನಾಲ್ಕು ದಿಕ್ಕುಗಳ ಮಹಾದ್ವಾರದ ಒಳಗೆ ಎಡಬಲದಲ್ಲಿ ತಮಿಳು, ಸಂಸ್ಕೃತ, ಕನ್ನಡ, ಆಂಗ್ಲಭಾಷೆಯಲ್ಲಿ ಕೆತ್ತನೆ ಮಾಡಲಾಗಿದೆ. ಈ ದೇವಸ್ಥಾನವು ಸುಮಾರು 100 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿದೆ ಎನ್ನಲಾಗಿದೆ. ಮಾತ್ರವಲ್ಲ ರಾಜ್ಯದ ಹಲವು ಜಿಲ್ಲೆಗಳಲ್ಲಿ ದೇವಾಲಯಗಳ ಜೀರ್ಣೋದ್ಧಾರ ಹಾಗೂ ನೂತನ ದೇವಾಲಯಗಳನ್ನು ಕಟ್ಟಿಸಿಕೊಟ್ಟು ಶ್ರೀಮಠದಲ್ಲಿ ತರಬೇತಿ ಹೊಂದಿದ ಅರ್ಚಕರನ್ನು ದೇವಾಲಯಗಳಿಗೆ ಕಳುಹಿಸಿಕೊಟ್ಟರು. ಹಾಗೂ ಒಟ್ಟು 32 ದೇವಾಲಯಗಳನ್ನು ನಿರ್ಮಿಸಿ, 26 ರಥಗಳನ್ನು ದೇವಾಲಯಗಳಿಗೆ ಕೊಡುಗೆಯನ್ನಾಗಿ ನೀಡಿದ್ದಾರೆ. ಆ ನಿಟ್ಟಿನಲ್ಲಿ ಇಂದು ನಿರಂತರವಾಗಿ ಪೂಜೆ ಪುರಸ್ಕಾರಗಳು ನೆರವೇರುವಂತೆ ಮಾಡಿ ಧಾರ್ಮಿಕಕ್ಷೇತ್ರಕ್ಕೆ ಅನನ್ಯ ಕೊಡುಗೆಯನ್ನು ಕೊಟ್ಟಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಶ್ರೀಗಳು ಧಾರ್ಮಿಕ ಪರಿಸರವನ್ನು ವಿಸ್ತರಿಸಿ ಅದಕ್ಕೆ ಬಹುತ್ವದ ಚೌಕಟ್ಟನ್ನು ಒದಗಿಸುತ್ತಾ ಬಂದಿದ್ದಾರೆ.

ಪೂಜ್ಯ ಮಹಾಸ್ವಾಮೀಜಿಯವರ ಕನಸಿನಂತೆ ಪ್ರತೀ ಹಳ್ಳಿಯ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಮಹತ್ತರ ಯೋಜನೆಯನ್ನು ರೂಪಿಸಿದರು. ಪೂಜ್ಯ ಶ್ರೀಗಳು 1974ರಲ್ಲಿ ಪಟ್ಟಕ್ಕೆ ಬಂದಾಗ ಕೇವಲ ಐವತ್ನಾಲ್ಕು ಜನ ವಿದ್ಯಾರ್ಥಿಗಳು ಗುರುಕುಲದಲ್ಲಿ ಇದ್ದರು. ವಿದ್ಯಾರ್ಥಿಗಳಿಗೂ ಹಾಗೂ ಬರುವ ಭಕ್ತರಿಗೆ ಅನ್ನಪ್ರಸಾದ ನೀಡುವುದು ಕಷ್ಟ ಸಾಧ್ಯವಾಗಿತ್ತು. ಇಂದು ಶ್ರೀಮಠದಲ್ಲಿ ಹದಿನೈದು ಸಾವಿರ ವಿದ್ಯಾರ್ಥಿಗಳು ಪ್ರಸಾದ ಭೋಜನವನ್ನು ಮಾಡುತ್ತಿದ್ದಾರೆ. ಶ್ರೀಮಠದಲ್ಲಿ ಅನಾಥಾಶ್ರಮ, ವಿದ್ಯಾರ್ಥಿ ನಿಲಯ, ಸೇರಿದಂತೆ ಸುತ್ತಮುತ್ತಲಿನ ಗ್ರಾಮದಿಂದ ಬರುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಮತ್ತು ಆಂಗ್ಲ ಮಾಧ್ಯಮದವರಿಗೆ ಅಲ್ಪ ಶುಲ್ಕದೊಂದಿಗೆ ಶಿಕ್ಷಣವನ್ನು ನೀಡಲಾಗುತ್ತಿದೆ.

ಪರಮಪೂಜ್ಯ ಶ್ರೀಗಳು ಕೇವಲ 39 ವರ್ಷದಲ್ಲಿ ನಾಡಿನಾದ್ಯಂತ ಅನೇಕ ವಿದ್ಯಾಸಂಸ್ಥೆಯನ್ನು ಹುಟ್ಟು ಹಾಕಿದ್ದಾರೆ. ಪ್ರಾಥಮಿಕ ಶಾಲೆಯಿಂದ ಪ್ರಾರಂಭಿಸಿ ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣ ಹಾಗೂ ಉನ್ನತ ಶಿಕ್ಷಣದ ಕಾಲೇಜುಗಳನ್ನು ತೆರೆದಿದ್ದಾರೆ. ಹಳ್ಳಿಯಿಂದ ದೆಹಲಿಯವರೆಗೂ ಮಹಾವೃಕ್ಷವಾಗಿ ಬೆಳೆಸಿದ್ದಾರೆ.

ಜಿಲ್ಲಾವಾರು ಶಾಲಾಕಾಲೇಜು ವಿವರಣೆ, ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನಿಸಬಹುದಾಗಿದೆ.

ಕ್ರ.ಸಂಖ್ಯೆ	ಜಿಲ್ಲೆಯ ಹೆಸರು	ಶಾಲಾ ಮತ್ತು ಕಾಲೇಜುಗಳು	ವಿದ್ಯಾರ್ಥಿಗಳ ಸಂಖ್ಯೆ
1	ಕೋಲಾರ	15	7575
2	ಚಿಕ್ಕಬಳ್ಳಾಪುರ	28	9390
3	ಹಾಸನ	21	6620
4	ಮಂಡ್ಯ	52	17460
5	ಬೆಂಗಳೂರು	18	8050
6	ಮಂಗಳೂರು	6	1210
7	ತುಮಕೂರು	18	4890
8	ಮೈಸೂರು	39	12924
9	ರಾಮನಗರ	15	4205
10	ಶಿವಮೊಗ್ಗ	21	8260
11	ಚಿಕ್ಕಮಗಳೂರು	22	6204
12	ಧಾರವಾಡ	3	730
13	ಬೆಂಗಳೂರು ಗ್ರಾಮಾಂತರ	8	3510
14	ಉತ್ತರ ಕನ್ನಡ	2	734

15	ಹೊರರಾಜ್ಯ	3	2948
	ಒಟ್ಟು	271	95,483 ವಿದ್ಯಾರ್ಥಿಗಳು

ಈ ದಾಖಲೆಯು ಶಾಲಾ ಮತ್ತು ಪದವಿಪೂರ್ವ ಕಾಲೇಜುಗಳಿಗೆ ಮಾತ್ರ ಸೀಮಿತವಾಗಿದೆ. ಹಾಗೂ ಉನ್ನತ ಪದವಿ ಶಿಕ್ಷಣ ಸಂಸ್ಥೆಗಳು ಒಟ್ಟು 36 ವಿದ್ಯಾರ್ಥಿಗಳ ಸಂಖ್ಯೆ 26,744 ಇರುತ್ತದೆ. ಶಿಕ್ಷಣ ಪ್ರೇಮಿಯಾಗಿ ಸಮಾಜಕ್ಕೆ ಅನನ್ಯ ಕೊಡುಗೆಗಳನ್ನು ನೀಡುತ್ತಾ ಬಂದಿದ್ದಾರೆ. ಪೂಜ್ಯ ಮಹಾಸ್ವಾಮೀಜಿ ಅವರ ಗ್ರಾಮ ಭೇಟಿ ಕಾರ್ಯಕ್ರಮವು ರಾಜ್ಯಾದ್ಯಂತ ಜರುಗಿತು. ಅಲ್ಲಿನ ಮುಗ್ಧಜನರ ಅಳಲನ್ನು ಅರಿತರು. ಸಮಾಜದಲ್ಲಿರುವ ರೋಗರುಜಿನಗಳಾದ ಬಡತನ, ಅಜ್ಞಾನ, ಅವಿದ್ಯೆ, ಅನಾರೋಗ್ಯ ಮುಂತಾದ ಪಿಡುಗುಗಳ ನಿವಾರಣೆಗೆ ಪರಿಹಾರದಿಂದ ಮಾತ್ರ ಸಾಧ್ಯವೆಂಬ ತತ್ತ್ವದಡಿಯಲಿ ಸಪ್ತ ತತ್ತ್ವಗಳನ್ನು ಅನುಷ್ಠಾನಕ್ಕೆ ತಂದರು. **'ಅನ್ನ', 'ಅಕ್ಷರ', 'ಆರೋಗ್ಯ', 'ಆಶ್ರಯ', 'ಅಧ್ಯಾತ್ಮ', 'ಆಕಳು', 'ಅರಣ್ಯ'**. ಹಸಿದವರಿಗೆ ಅನ್ನ ಪ್ರಸಾದ ನೀಡಿ ತ್ರಿವಿಧದಾಸೋಹದ ಪರಿಕಲ್ಪನೆಯನ್ನು ಸಮಾಜಕ್ಕೆ ನೀಡಿದರು. ಶ್ರೀ ಕ್ಷೇತ್ರ ಚುಂಚನಗಿರಿ ಹಾಗೂ ಅವರ ಎಲ್ಲಾ ಶಾಖಾಮಠಗಳು ಇಂದು ಲಕ್ಷಾಂತರ ಭಕ್ತ ಸಮೂಹಕ್ಕೆ ದಾಸೋಹವನ್ನು ನೀಡುತ್ತಾ ಬರುತ್ತಿವೆ. ಅನಕ್ಷರಸ್ಥರನ್ನು ಶ್ರೀಮಠಕ್ಕೆ ಕರೆತಂದು ಅವರಿಗೆ ಸಂಸ್ಕಾರ ಶಿಕ್ಷಣವನ್ನು ನೀಡಿ ಸಮಾಜಕ್ಕೆ ಅಕ್ಷರ ಸಂತರಾದರು. ಅದರ ಪರಿಣಾಮ ಇಂದು 322ಕ್ಕೂ ಹೆಚ್ಚು ವಿದ್ಯಾಸಂಸ್ಥೆಯಲ್ಲಿ ಒಂದು ಲಕ್ಷದ ಮೂವತ್ತು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅನಾರೋಗ್ಯ ಪೀಡಿತರಾದ ಗ್ರಾಮೀಣ ಜನರ ಬದುಕಿಗೆ ಆಶಾಕಿರಣವಾಗಿ ಉಚಿತ ಆರೋಗ್ಯ ಸೇವೆಯನ್ನು ಒದಗಿಸಿ ಬಡವರ ಬದುಕಿಗೆ ವೈದ್ಯನಾರಾಯಣರಾದ ಶ್ರೀಗಳು, ಅನೇಕ ಅನಾಥ ಮಕ್ಕಳಿಗೆ ಆಶ್ರಯ ನೀಡಿ ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಯಶಸ್ವಿಯಾದರು. ಅಧ್ಯಾತ್ಮದ ತೃಷೆಯಿಂದ ಬಂದ ಸಾಧಕರಿಗೆ ಜ್ಞಾನೋಪದೇಶ, ಸಂಸ್ಕೃತ, ವೇದಾಂತವನ್ನು ಕಲಿಸಿ ಸನ್ಯಾಸ ದೀಕ್ಷೆ ನೀಡಿ ಶ್ರೋತ್ರೀಯ ಬ್ರಹ್ಮನಿಷ್ಠ ಗುರುವಾದರು. ಕಸಾಯಿಖಾನೆಗೆ ಹೋಗುತ್ತಿದ್ದ ಸಹಸ್ರಾರು ಆಕಳು(ಗೋವು)ಗಳನ್ನು ರಕ್ಷಿಸಲು ರಾಜ್ಯಾದ್ಯಂತ ಗೋಶಾಲೆಗಳನ್ನು ಕಟ್ಟಿಸಿ ಅವುಗಳನ್ನು ಸಂರಕ್ಷಿಸುವ ಮಹತ್ಕಾರ್ಯವನ್ನು ಮಾಡಿದರು.

ಗ್ರಾಮೀಣ ಪ್ರದೇಶದ ಜನರನ್ನು ಗಮನದಲ್ಲಿ ಇಟ್ಟುಕೊಂಡು ಆರಂಭಿಸಿದ ಶಿಬಿರಗಳಲ್ಲಿ, ಧರ್ಮ ಸಹಿಷ್ಣುತೆ, ಸಂಸ್ಕೃತಿ, ಸದಾಚಾರ, ಸಚ್ಚಿಂತನೆ, ನೀತಿ ಸಂಹಿತೆ ಮಾಹಿತಿಯನ್ನೊಳಗೊಂಡಂತೆ ಸಾಮಾಜಿಕ ಔದಾರ್ಯ, ಸಾಮಾಜಿಕ ಮೌಲ್ಯ, ಮನೆಮದ್ದು, ಸರಳ ಜೋತಿಷ್ಯ, ಪೂಜಾ ವಿಧಾನ, ಪ್ರಥಮ ಚಿಕಿತ್ಸೆ ಮುಂತಾದ ವಿಚಾರಧಾರೆಗಳನ್ನು ನುರಿತ ಉಪನ್ಯಾಸಕರಿಂದ ಬೋಧನೆಗಳನ್ನು ಏರ್ಪಡಿಸುತ್ತಾರೆ. ಅದರೊಂದಿಗೆ ಪ್ರತೀ ದಿನ ಯೋಗ, ಧ್ಯಾನ, ಪ್ರಾರ್ಥನೆ, ಭಜನೆ, ಕ್ರೀಡೆ ಇವುಗಳನ್ನು ನಡೆಸಲಾಗುತ್ತದೆ.

ಈ ಶಿಬಿರಕ್ಕೆ ರಾಜ್ಯದ ಎಲ್ಲಾ ಭಾಗದಿಂದಲೂ ಮಂಡ್ಯ, ಮೈಸೂರು, ತುಮಕೂರು, ಹಾಸನ, ಚಿಕ್ಕಮಗಳೂರು, ಮಂಗಳೂರು, ಚಿತ್ರದುರ್ಗ, ರಾಮನಗರ, ಬೆಂಗಳೂರು, ಧಾರವಾಡ, ಕುಮುಟ ಮುಂತಾದ ಜಿಲ್ಲೆಗಳಿಂದ ಜಾತಿ, ಮತ, ಬೇಧವಿಲ್ಲದೆ ತರಬೇತಿಗೆ ಯುವಕ–ಯುವತಿಯರು ಬರುತ್ತಾರೆ. ಅವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡಿ ಪ್ರತೀ ವರ್ಷ ಏಪ್ರಿಲ್, ಮೇ ತಿಂಗಳಲ್ಲಿ ಆಯೋಜಿಸುವ ಕಾರ್ಯಗಳನ್ನು ಆಯಾಯ ಜಿಲ್ಲೆಯ ಸ್ವಾಮೀಜಿಗಳು ಮಾಡುತ್ತಿದ್ದಾರೆ. ಈ ಶಿಬಿರವು ಉಚಿತವಾಗಿ ನಡೆಯುತ್ತದೆ. ಊಟ, ವಸತಿ, ಸಮವಸ್ತ್ರ, ಪುಸ್ತಕ ಮತ್ತು ದೈನಂದಿನ ಬಳಕೆಯ ವಸ್ತುಗಳನ್ನು ನೀಡಲಾಗುತ್ತದೆ. ಈ ರೀತಿಯ

ಶಿಬಿರವನ್ನು ಕಳೆದ 27 ವರ್ಷದಿಂದ ನಿರಂತರವಾಗಿ ಪೂಜ್ಯ ಸ್ವಾಮೀಜಿಯವರು ನಡೆಸುತ್ತಾ ಬಂದಿದ್ದ ಈ ಶಿಬಿರದಲ್ಲಿ ಐದುಸಾವಿರಕ್ಕೂ ಹೆಚ್ಚು ಯುವಕ-ಯುವತಿಯರು ಪಾಲ್ಗೊಳ್ಳುತ್ತಾರೆ.

ಅಧ್ಯಯನದ ಫಲಿತಗಳು :

• ಆದಿರುದ್ರನಿಂದ ಸ್ಥಾಪಿಸಲ್ಪಟ್ಟ ಚುಂಚನಗಿರಿಗೆ 'ಆದಿಚುಂಚನಗಿರಿ' ಎಂದು ಹೆಸರು ಬಂದಿದೆ ಎಂಬ ಅಭಿಪ್ರಾಯ ಅನೇಕ ವಿದ್ವಾಂಸರ ವಿಸ್ತೃತ ಚರ್ಚೆಯಿಂದ ತಿಳಿದು ಬಂದಿರುತ್ತದೆ.

• 'ಚುಂಚ'-'ಕಂಚ' ರೆಂಬ ರಾಕ್ಷಸರು ಬೆಟ್ಟದಲ್ಲಿ ವಾಸವಿದ್ದರು. ಅವರ ಸಂಹಾರವನ್ನು ಭೈರವ ಮಾಡಿದ ಕಾರಣ ಆ ಹೆಸರೇ 'ಚುಂಚನಗಿರಿ' ಆಯಿತು ಎಂಬುದು ಜನಪದ ಸಾಹಿತ್ಯ ಹಾಗೂ ಗ್ರಾಮ್ಯ ಕಥೆಗಳಿಂದ ತಿಳಿದು ಬರುತ್ತದೆ.

• ಈ ಕ್ಷೇತ್ರದಲ್ಲಿ ನಾಥಪರಂಪರೆಯ ಹಲವು ಸಮಾಧಿಗಳನ್ನು ಕಾಣಬಹುದು. 'ಜ್ವಾಲಾಪೀಠ' 'ಸಿದ್ಧಸಿಂಹಾಸನ' ದಲ್ಲಿ ಎಪ್ಪತ್ತೊಂದು ಪೀಠಾಧ್ಯಕ್ಷರು ಶಿವರಾತ್ರಿ ಮತ್ತು ನವರಾತ್ರಿ ಒಂಬತ್ತು ದಿನಗಳ ಜಾತ್ರೆಯ ಸಂದರ್ಭಗಳಲ್ಲಿ ಸಿದ್ಧಸಿಂಹಾಸನರೂಢರಾಗಿರುವುದು ಅನೂಚಾನವಾಗಿ ನಡೆದು ಬಂದಿರುವುದು ಈ ಅಧ್ಯಯನದಿಂದ ತಿಳಿದು ಬರುತ್ತದೆ.

• ಚುಂಚನಗಿರಿ ಬೆಟ್ಟವನ್ನು ಪರಿಕ್ರಮಣ ಮಾಡಿದಾಗ ಅನೇಕ ಕುರುಹುಗಳು ಕಂಡುಬರುತ್ತದೆ. ಇಲ್ಲಿ ನಾಥಯೋಗಿಗಳು ವಾಸಿಸುತ್ತಿದ್ದ ಹಲವು ಗುಹೆಗಳು ಮತ್ತು ಹಳೇಮಂಟಪಗಳಿಲ್ಲಿದ್ದು ಅಲ್ಲಿ ಭೈರವನ ಉಪಾಸನೆ ನಡೆಯುತ್ತಿತ್ತು ಎಂಬುದಕ್ಕೆ ಅನೇಕ ಕುರುಹುಗಳು ಕಂಡುಬರುತ್ತದೆ. ಇದಕ್ಕೆ ಸಾಕ್ಷಿಯಾಗಿ ಆ ಗುಹೆ ಮತ್ತು ಮಂಟಪಗಳನ್ನು ಇಂದಿಗೂ ಕಾಣಬಹುದು. ಇವುಗಳೊಂದಿಗೆ ನಾಗರಕಲ್ಲು, ಕೂಗುಬಂಡೆ, ಕಣಿವೆ ಆಂಜನೇಯ, ಸಪ್ಪೇಸ್ವಾಮಿ ಗುಹೆ ಇವುಗಳೊಂದಿಗೆ ಮಯೂರವನಗಳನ್ನು ನೋಡಬಹುದು.

• 'ಚುಂಚನಗಿರಿ' ಹೆಸರಿನ ಬಗ್ಗೆ ತುಲನಾತ್ಮಕವಾಗಿ ವಿಶ್ಲೇಷಿಸಿದಾಗ ತಿಳಿದು ಬರುವ ಸಂಗತಿಗಳೆಂದರೆ 'ಚುಂಚ' 'ಚುಂಚು' ಶಬ್ಧಕ್ಕೆ ಅನೇಕ ಅರ್ಥಗಳು ಕಂಡು ಬರುತ್ತವೆ. ಅದರಂತೆ 'ಚುಂಚ' ಅಂದರೆ ಪಕ್ಷಿಯ ಕೊಕ್ಕು, ಛಾವಣಿ, ವನಸ್ಪತಿ, ಪ್ರಸಿದ್ಧ, ಪ್ರಖ್ಯಾತಿ ಇತ್ಯಾದಿ ಅರ್ಥಗಳು ಕಂಡುಬರುತ್ತವೆ. ಅದರಂತೆ ಚುಂಚನಗಿರಿ ಬೆಟ್ಟದಲ್ಲಿ ಇರುವ 'ಗಳಿಗ್ಗಲ್ಲು' ಸುಮಾರು 105 ಅಡಿ ಎತ್ತರ ಏಕಶಿಲೆಯು 'ಚುಂಚ' ಅಂದರೆ ಪಕ್ಷಿಯ ಕೊಕ್ಕಿನಾಕಾರದಲ್ಲಿದೆ, ಮಾತ್ರವಲ್ಲ ಬೆಟ್ಟದಲ್ಲಿ ಅನೇಕ ಕಡೆ ಛಾವಣಿಗಳಂತೆ ವರ್ತುಲಾಕಾರ ಉಪ್ಪರಿಕೆಗಳ ಆಕಾರದಲ್ಲಿ ಕಂಡುಬರುತ್ತದೆ. ಹಾಗೂ ಬೆಟ್ಟದ ಸುತ್ತಲಿನ ಪರಿಸರದಲ್ಲಿ ಔಷಧೀಯ ಗುಣವುಳ್ಳ ಅನೇಕ ಗಿಡಗಳನ್ನು ನೋಡಬಹುದಾಗಿದೆ. ಆದ್ದರಿಂದ ಪ್ರಾಚೀನರು 'ಚುಂಚನಗಿರಿ' ಎಂದು ಹೆಸರನ್ನು ಇಟ್ಟಿರಬಹುದೆಂದು ನಮ್ಮ ಅಭಿಪ್ರಾಯವಾಗಿದೆ.

• ಚುಂಚನಗಿರಿ ಮಠದ ಐತಿಹಾಸಿಕ ನೆಲೆಯಲ್ಲಿ ಗುರುತಿಸುವುದಾದರೆ ಚುಂಚನಗಿರಿ ಮಠಕ್ಕೂ ಚೋಳರ ರಾಜರಿಗೂ ಅವಿನಾಭಾವ ಸಂಬಂಧಗಳು ಇದ್ದುದಕ್ಕೆ ಕುರುಹುಗಳು ಕಂಡುಬರುತ್ತದೆ. ಅವರು ಕಟ್ಟಿಸಿದ ಗಂಗಾಧರೇಶ್ವರ ದೇವಾಲಯ, ಚೋಳೂರು ಕಂಬಗಳನ್ನು ಈಗಲೂ ನೋಡಬಹುದು. 'ವಿಕ್ರಮಚೋಳ' ಈ ಪ್ರಾಂತ್ಯವನ್ನು ಆಳುತ್ತಿದ್ದನು ಎಂದು ತಿಳಿದುಬರುತ್ತದೆ.

• ಶ್ರೀ ಆದಿಚುಂಚನಗಿರಿ ಮಠದ ಪ್ರಾಚೀನ ಇತಿಹಾಸವನ್ನು ಅವಲೋಕಿಸಿದಾಗ ಕಂಡುಬರುವ ಅಂಶವೆಂದರೆ, ಎಪ್ಪತ್ತೊಂದು ನಾಥ ಯೋಗಿಗಳು ಈ ಪೀಠವನ್ನು ಅಲಂಕರಿಸಿದ್ದಾರೆ. ಶೈವಪುರಾಣದಲ್ಲಿ ಉಲ್ಲೇಖಿತವಾಗಿರುವಂತೆ ಈ ಕ್ಷೇತ್ರವು ತ್ರೇತಾಯುಗದಲ್ಲಿ ಪ್ರಸ್ಥಾಪಿತವಾಗಿರುವುದನ್ನು ಕಾಣಬಹುದು. ಪ್ರಸಿದ್ಧ ಚೋಳವಂಶದ ದೊರೆಯಾದ 'ವಿಕ್ರಮಚೋಳ' ನ (ಕ್ರಿ.ಶ. 1118–1135ರವರೆಗೆ) ಈ ಪ್ರಾಂತ್ಯವನ್ನು ಆಳ್ವಿಕೆ ನಡೆಸಿರುತ್ತಾನೆ. ಆದ್ದರಿಂದ ಕ್ರಿ.ಶ. 9ನೇ ಶತಮಾನಕ್ಕಿಂತಲೂ ಹಿಂದಿನದೆಂದು ಈ ಕ್ಷೇತ್ರದ ಐತಿಹಾಸಿಕತೆಯನ್ನು ಗುರುತಿಸಬಹುದಾಗಿದೆ. ನಾಥ ಪರಂಪರೆ ಹಾಗೂ ಭೈರವನ ಆರಾಧನೆಯನ್ನು ಗಮನಿಸಿದಾಗ ಕ್ರಿ.ಶ. ಒಂದನೇ ಶತಮಾನಕ್ಕೂ ಹಿಂದಿನದೆಂದು ಗುರುತಿಸಬಹುದಾಗಿದೆ. ರಾಜ ಮಹಾರಾಜರಿಂದ ದತ್ತವಾಗಿರುವ ಬಿರುದುಬಾವಳಿಗಳು ಮತ್ತು ಅಲ್ಲಿ ಕಂಡುಬರುವ ಅನೇಕ ಶಾಸನಗಳು ಇದನ್ನು ಸಾಕ್ಷೀಕರಿಸುತ್ತವೆ.

• ಪೂಜ್ಯ ಮಹಾಸ್ವಾಮೀಜಿಗಳವರು 1974ರಲ್ಲಿ ಪಟ್ಟಕ್ಕೆ ಬಂದು 39 ವರ್ಷಗಳಲ್ಲಿ ಮಾಡಿರುವ ಸಾಧನೆಯ ಸತ್ಫಲತೆಯು ಇಂದು 326 ವಿದ್ಯಾಸಂಸ್ಥೆಗಳ ಸ್ಥಾಪನೆ ಮೂಲಕ ಮತ್ತು ಆ ಸಂಸ್ಥೆಗಳಲ್ಲಿ ಸುಮಾರು ಒಂದು ಲಕ್ಷದ ಇಪ್ಪತ್ತೆಂಟು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ಅವರು ಶೈಕ್ಷಣಿಕ ಕ್ಷೇತ್ರಕ್ಕೆ ಕೊಟ್ಟ ಅನನ್ಯ ಕೊಡುಗೆಯಾಗಿದೆ.

• ಗ್ರಾಮೀಣ ಪ್ರದೇಶಗಳಲ್ಲಿ ಅತಿ ಹೆಚ್ಚು ವಿದ್ಯಾಸಂಸ್ಥೆಗಳು ಕಂಡುಬರುತ್ತವೆ. ಪ್ರಾಥಮಿಕ, ಪ್ರೌಢಶಿಕ್ಷಣ, ಪದವಿ ಕಾಲೇಜು, ಸ್ನಾತಕೋತ್ತರ ಕೇಂದ್ರಗಳೊಂದಿಗೆ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿರುತ್ತಾರೆ. ಇದರೊಂದಿಗೆ ಸಮಾಜದಲ್ಲಿ ಇರುವ ಬಡ ಮತ್ತು ಅನಾಥ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ವಸತಿ ಸೌಲಭ್ಯಗಳನ್ನು ನೀಡಿರುವುದನ್ನು ಗಮನಿಸಬಹುದಾಗಿದೆ.

• ಪೂಜ್ಯ ಶ್ರೀಗಳವರು ಕೇವಲ ಶೈಕ್ಷಣಿಕ ಕ್ಷೇತ್ರಕ್ಕೆ ಮಾತ್ರವಲ್ಲ ಅವರ ಕೊಡುಗೆ ಸಾಮಾಜಿಕ, ಧಾರ್ಮಿಕ, ಅಧ್ಯಾತ್ಮಿಕ ಕ್ಷೇತ್ರಗಳಿಗೂ ವಿಸ್ತರಿಸಿರುವುದು ಅವರ ಸಾಧನೆಯ ವ್ಯಾಪ್ತಿಯನ್ನು ಬೆರಗನ್ನುಂಟುಮಾಡುತ್ತದೆ. ಶ್ರೀ ಕ್ಷೇತ್ರ ಆದಿಚುಂಚನಗಿರಿಯಲ್ಲಿ ಶ್ರೀ ಕಾಲಭೈರವೇಶ್ವರ ದೇವಾಲಯವನ್ನು ಎರಡು ಎಕರೆ ಜಾಗದಲ್ಲಿ ನೂರು ಕೋಟಿ ವೆಚ್ಚದಲ್ಲಿ ಭವ್ಯವಾದ ದೇವಾಲಯವನ್ನು ನಿರ್ಮಾಣ ಮಾಡಿರುತ್ತಾರೆ. ಅಲ್ಲಿ ಅಷ್ಟಭೈರವ, ಅಷ್ಟಾಷ್ಟಭೈರವರ ವಿಗ್ರಹಗಳು ಸ್ಥಾಪನೆಯಾಗಿವೆ. ರಾಜ್ಯದ ಹಲವು ಭಾಗಗಳಲ್ಲಿ 32 ದೇವಾಲಯಗಳನ್ನು ನಿರ್ಮಾಣ ಮಾಡಿರುತ್ತಾರೆ. ಅನೇಕ ದೇವಾಲಯಗಳಿಗೆ ರಥಗಳನ್ನು ಕೊಡುಗೆಯಾಗಿ ನೀಡಿರುತ್ತಾರೆ.

• ಪೂಜ್ಯ ಶ್ರೀಗಳವರ ವಾರ್ಷಿಕ ಪಟ್ಟಾಭಿಷೇಕದ ಸವಿನೆನಪಿನಲ್ಲಿ ಕಳೆದ 42 ವರ್ಷಗಳಿಂದ 'ಶ್ರೀ ಕಾಲಭೈರವೇಶ್ವರ ಜಾನಪದ ಮೇಳ'ವನ್ನು ನಿರಂತರವಾಗಿ ಜರುಗಿಸಲಾಗುತ್ತದೆ. ಆ ಮೇಳದ ಸಂದರ್ಭದಲ್ಲಿ ಸ್ವಾಮೀಜಿ ಅವರ ಮತ್ತೊಂದು ಆಸಕ್ತಿ ಕ್ಷೇತ್ರವಾಗಿದ್ದ ಜಾನಪದ ಸಂಸ್ಕೃತಿಯನ್ನು ಗೌರವಿಸಿ ಅದಕ್ಕೆ ಆದ್ಯತೆಯನ್ನು ನೀಡಲಾಗುತ್ತದೆ.

• ಮಹಾಸ್ವಾಮೀಜಿಯವರು ಸಾಹಿತ್ಯಕ್ಷೇತ್ರಕ್ಕೂ ಅನನ್ಯ ಕೊಡುಗೆಗಳನ್ನು ನೀಡಿರುತ್ತಾರೆ. ನೂರಾರು ಪುಸ್ತಕಗಳ ಮುದ್ರಣ, ಸಾಹಿತಿಗಳಿಗೆ ಆರ್ಥಿಕ ನೆರವು ಮಾತ್ರವಲ್ಲ ಹಲವು ಕ್ಷೇತ್ರಗಳಲ್ಲಿ ಸಾಧನೆಗೈದ ಮಹನೀಯರಿಗೆ ಶ್ರೀಮಠದಿಂದ 'ಚುಂಚಶ್ರೀ' ಪ್ರಶಸ್ತಿ ಹಾಗೂ ನಗದು ನೀಡಿ ಗೌರವಿಸುವ ಮಹಾನ್ ಕಾರ್ಯವನ್ನು ಕೈಗೊಂಡು ಶ್ರೀಮಠದ ಘನತೆಯನ್ನು ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಿರುತ್ತಾರೆ.

• ಅನಕ್ಷರಸ್ಥ ಪರಂಪರೆಯ ಗ್ರಾಮೀಣ ವರ್ಗದ ಪ್ರತಿಭಾವಂತ ಕಲಾವಿದರು ತಮ್ಮ ಜಾನಪದ ಸಾಹಿತ್ಯದಲ್ಲಿ ಜನರು ವಿದ್ವತ್‌ಪೂರ್ಣವಾಗಿ ಜನಪದ ಸಾಹಿತ್ಯವನ್ನು ಚುಂಚನಗಿರಿ ಭೈರವ ಮತ್ತು ಗುರುಮಠಗಳನ್ನು ಕುರಿತ ತಮ್ಮ ಭಾವನಾತ್ಮಕ ಸಂಭಂದಗಳನ್ನು ಆ ಸಾಹಿತ್ಯದಲ್ಲಿ ವ್ಯಕ್ತಪಡಿಸಿರುತ್ತಾರೆ. ಇವರುಗಳು ಹಾಡಿದ ಜಾನಪದ ಗೀತೆಗಳನ್ನು 69ನೇ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ, ಅ.ನ.ಕೃಷ್ಣರಾಯರು ಮತ್ತು ಹೆಚ್.ಎಲ್. ನಾಗೇಗೌಡರು ಸಂಗ್ರಹಿಸಿ ಮುದ್ರಿಸಿ ಪ್ರಕಟಿಸಿರುತ್ತಾರೆ.

• ಚುಂಚನಗಿರಿಯ ಜಾನಪದ ಸಾಹಿತ್ಯವನ್ನು ಗಮನಿಸಿದಾಗ ಚುಂಚನಗಿರಿ ಜಾತ್ರೆಯನ್ನು ಕುರಿತಂತೆ ಅನೇಕ ಉಲ್ಲೇಖಗಳಲ್ಲಿ 'ಭೈರವನ ತೇರು ಹರಿತಾಯಿತೋ' ಎಂಬುದೇ ಪ್ರಸ್ಥಾಪಿತವಾಗಿದೆಯೇ ಹೊರತು ಎಲ್ಲೂ, 'ಗಂಗಾಧರನ ತೇರು' ಎಂದು ಉಲ್ಲೇಖಿತವಾಗಿರುವುದಿಲ್ಲ. ವಸ್ತುತಃ ತೇರಿನ ಮೇಲೆ ಚರಮೂರ್ತಿಯಾದ 'ಗಂಗಾಧರೇಶ್ವರ' ಮೂರ್ತಿಯನ್ನೇ ಕೂರಿಸುತ್ತಾರೆ ಹೊರತು ಭೈರವನನ್ನಲ್ಲ ಎಂಬುದು ಹೆಚ್ಚಿನ ಭಕ್ತರಿಗೆ ತಿಳಿದಿಲ್ಲ. ಅರ್ಥಾತ್ ಜನರ ನಂಬಿಕೆ 'ಭೈರವನ ಜಾತ್ರೆ' 'ಭೈರವನ ಪರಸೆ' 'ಚುಂಚನಗಿರಿ ತೇರು' ಎಂಬ ಈ ಭಾವವೇ ಜಾನಪದ ಸಾಹಿತ್ಯದಲ್ಲಿ ಬೆರೆತು ಹೋಗಿದೆ. ಅಂದರೆ ಭೈರವ ಬೇರೆ ಅಲ್ಲ, ಗಂಗಾಧರ ಬೇರೆ ಅಲ್ಲ ಎಂಬ ಭಾವ ಜನರಲ್ಲಿ ಇದೆ.

• ಜಾನಪದ ಸಾಹಿತ್ಯದಲ್ಲಿ ಕಂಡು ಬರುವ ಮತ್ತೊಂದು ಸಂಗತಿಯೆಂದರೆ ಚುಂಚನಗಿರಿ ಜಾತ್ರೆಯು ನಡೆಯುವ 'ಭೈರವನ ತಿರುಗಣಿ' ಉತ್ಸವದ ಬಗ್ಗೆ ಎಲ್ಲೂ ಉಲ್ಲೇಖಗಳು ಕಂಡುಬರುವುದಿಲ್ಲ. ಈ ಉತ್ಸವ ರಾತ್ರಿ ಹನ್ನೊಂದು ಗಂಟೆಯ ಅನಂತರ ನಡೆಯುತ್ತದೆ. ಬೆಳಗಿನ ಜಾವ ನಾಲ್ಕು ಗಂಟೆಗೆ ಮಹಾರಥೋತ್ಸವ ನೆರವೇರುತ್ತದೆ.

•ಪೂಜ್ಯ ಮಹಾಸ್ವಾಮೀಜಿ ಅವರು ಅನಾಥಾಶ್ರಮ, ವೃದ್ಧಾಶ್ರಮ ಮತ್ತು ಮಹಿಳಾಸೇವಾಶ್ರಮಗಳನ್ನು ತೆರೆದು ಆರ್ತರಿಗೆ ಆಶ್ರಯ ನೀಡುತ್ತಾ ಅವರ ಬದುಕಿನಲ್ಲಿ ಸಾಂಘಿಕಸ್ಮಿತವನ್ನು ಕಾಣುವಂತೆ ಮಾಡಿರುವುದು ಗಮನಾರ್ಹವಾಗಿದೆ.

• ಕರ್ನಾಟಕ ವನಸಂವರ್ಧನ ಟ್ರಸ್ಟ್ ಸ್ಥಾಪನೆ ಮಾಡಿ ರಾಜ್ಯದಲ್ಲಿ ಐದು ಕೋಟಿ ಗಿಡಗಳನ್ನು ನೆಟ್ಟು ಅವುಗಳ ಸಂರಕ್ಷಣೆಗೆ ಟ್ರೀಗಾರ್ಡ್ ಹಾಗೂ ಎಲ್ಲಾ ಜಿಲ್ಲೆಗಳಿಗೆ ಟ್ರ್ಯಾಕ್ಟರ್ ಹಾಗೂ ನೀರಿನ ಟ್ಯಾಂಕರ್ ವಿತರಿಸಿದ್ದು ಮತ್ತು ಕೆರೆಕಟ್ಟೆಗಳ ನಿರ್ಮಾಣ ಹಾಗೂ ರಾಜ್ಯದ ಹಲವು ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ತೆರೆದು ಸಮಾಜಮುಖಿಕಾರ್ಯಗಳನ್ನು ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ.

• ಗ್ರಾಮೀಣ ಪ್ರದೇಶದಲ್ಲಿ ಬಡಜನರಿಗೆ ಸುಸಜ್ಜಿತವಾದ 1050 ಹಾಸಿಗೆಯ ಆಸ್ಪತ್ರೆಯನ್ನು ಕಟ್ಟಿಸಿ ಆಧುನಿಕ ಸೌಲಭ್ಯವನ್ನು ಒದಗಿಸಿ ಉಚಿತ ಚಿಕಿತ್ಸೆಯನ್ನು ನೀಡುತ್ತಿರುವುದು ಮಾತ್ರವಲ್ಲ ಪ್ರತಿ ವರ್ಷವೂ ವೈದ್ಯಕೀಯ ಶಿಬಿರಗಳನ್ನು ಸಂಘಟಿಸುವುದರ ಮೂಲಕ ಸೀಳುತುಟಿ, ಪ್ಲಾಸ್ಟಿಕ್ ಸರ್ಜರಿ, ಕೃತಕಕಾಲು ಜೋಡಣೆ ಮುಂತಾದ ಸೇವೆಯನ್ನು ಮಾಡುತ್ತಿರುವುದು ಉಲ್ಲೇಖಾರ್ಹವಾಗಿದೆ.

• ಪೂಜ್ಯ ಶ್ರೀಗಳು ಮಾಡಿದ ಮಹತ್‌ಕಾರ್ಯವೆಂದರೆ ರಾಜ್ಯ–ಹೊರರಾಜ್ಯ ಜಿಲ್ಲೆಗಳಲ್ಲಿ ಶ್ರೀ ಆದಿಚುಂಚನಗಿರಿ ಶಾಖಾಮಠಗಳನ್ನು ತೆರೆದು ಅವುಗಳ ನಿರ್ವಹಣೆಗೆ ತಮ್ಮ ಮಠದಲ್ಲೇ ಶಿಕ್ಷಿತರಾದ ವಟುಗಳಿಗೆ ಸಂಸ್ಕೃತ, ವೇದ, ಆಗಮ ಹಾಗೂ ಲೋಕಾನುಭವವನ್ನು ನೀಡಿ ಅವರಿಗೆ ಸನ್ಯಾಸದೀಕ್ಷೆಯನ್ನು ನೀಡಿರುತ್ತಾರೆ.

ಪ್ರತಿಜಿಲ್ಲೆಗೊಬ್ಬರಂತೆ ಕಾರ್ಯದರ್ಶಿಗಳನ್ನಾಗಿ ಆಯೋಜಿಸಿ ಶ್ರೀಮಠದ ಅಭಿವೃದ್ಧಿಗೆ ತೊಡಗಿಸಿಕೊಳ್ಳುವಂತೆ ಅನುಗ್ರಹಿಸಿರುತ್ತಾರೆ.

• ಮಹಾಸ್ವಾಮೀಜಿ ಅವರು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಅಧ್ಯಾತ್ಮಿಕವಾಗಿ ಮಾಡಿರುವ ಸೇವೆ ಅನನ್ಯವಾದದ್ದು. ಇವರ ಸೇವಾಕೈಂಕರ್ಯಗಳನ್ನು ಗಮನಿಸಿ ಹಲವು ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಿದೆ. ದೇಶ ವಿದೇಶಗಳ ಸಂಘಸಂಸ್ಥೆಗಳು ಅನೇಕ ಬಿರುದುಗಳನ್ನು ನೀಡಿ ಗೌರವಿಸಿವೆ. ಭಾರತ ಸರಕಾರ ಮಹಾಸ್ವಾಮೀಜಿ ಅವರ ಸಾಧನೆಗೆ 'ಪದ್ಮಭೂಷಣ' ಪ್ರಶಸ್ತಿ ನೀಡಿ ಗೌರವಿಸಿರುವುದು ಶ್ರೀಮಠದ ಹೆಮ್ಮೆಯ ಸಂಗತಿಯಾಗಿರುತ್ತದೆ.

ಪರಾಮರ್ಶನ ಗ್ರಂಥಗಳು :

1. ಅ.ನ.ಕೃ, 'ಶ್ರೀ ಆದಿಚುಂಚನಗಿರಿ', ಮೂಲ ಜನಪದ ಸಂಗ್ರಹ, 1960.
2. ಅ.ನ.ಕೃಷ್ಣರಾಯ(ಸಂ), 'ಭಾರತೀಯ ಸಂಸ್ಕೃತಿ ದರ್ಶನ', ಸಾಗರ್ ಪ್ರಕಾಶನ, ನಾಗರಬಾವಿ, ಬೆಂಗಳೂರು, 2009.
3. ಅನಂತರಾಮ ರಾವ್. ಕೆ, 'ಸಂಪೂರ್ಣ ರಾಮಾಯಣ', ವಿದ್ಯಾಪಬ್ಲಿಷಿಂಗ್ ಹೌಸ್, ಮಂಗಳೂರು, 2005.
4. ಅನಂತರಾಜಗೌಡ ಪುತ್ತೂರು, 'ನಮ್ಮ ಬೇರುಗಳ ಹುಡುಕಾಟದಲ್ಲಿ', ಪುತ್ತೂರು, ದ.ಕ. 2015.
5. ಅನಂತರಂಗಾಚಾರ್ ಎನ್.ಎಸ್, 'ವೈಧಿಕ ಸಾಹಿತ್ಯ ಚರಿತ್ರೆ', ಪ್ರಸಾರಂಗ ಮಾನಸ ಗಂಗೋತ್ರಿ, ಮೈಸೂರು, 1968.
6. ಆಚಾರ್ಯ ಬಲದೇವ ಉಪಾಧ್ಯಾಯ, 'ಸಂಸ್ಕೃತ ಸಾಹಿತ್ಯದ ಇತಿಹಾಸ', ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, 1980.
7. 'ಎಫಿಗ್ರಾಫಿಯ ಕರ್ನಾಟಕ' (ಸಂ.7), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1979.
8. ಕೃಷ್ಣಮೂರ್ತಿ ಕೆ, ವಿದ್ವಾನ್ ರಂಗನಾಥ್ ಶರ್ಮ, ವಿದ್ವಾನ್ ಸಿದ್ಧಗಂಗಯ್ಯ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಡಾ. ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ(ರಿ) ಮೈಸೂರು, 2016.
9. ಕೃಷ್ಣಮೂರ್ತಿ ಕೆ.ಜಿ, ಬಿ.ಎಸ್. ರಾಮಕೃಷ್ಣರಾವ್, 'ಸಂಸ್ಕೃತ ಭಾಷೆ ಮತ್ತು ಸಾಹಿತ್ಯ', ಸುರಭಾರತೀ ಪ್ರಕಾಶನ, ಸೀತಾಪತಿ ಅಗ್ರಹಾರ, ಬೆಂಗಳೂರು, 1978.
10. 'ಕನ್ನಡ ವಿಶ್ವಕೋಶ' (ಸಂ.4), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, 2004.
11. 'ಕನ್ನಡ ವಿಷಯ ವಿಶ್ವಕೋಶ', ಜಾನಪದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 2006.

12. ಕೃಷ್ಣಪ್ಪ(ಅನು), 'ಶ್ರೀ ಬ್ರಹ್ಮವೈವರ್ತ ಮಹಾಪುರಾಣಂ'(ಮೂಲ), ಸಂಚಿಕೆ.10(ಅ), ಶ್ರೀ ಶಾರದಾಪ್ರೆಸ್, ಮೈಸೂರು, 1962.

13. ಕೃಷ್ಣಮೂರ್ತಿ ಕೆ, ವಿದ್ವಾನ್. ಎನ್. ರಂಗನಾಥ ಶರ್ಮ, ವಿದ್ವಾನ್. ಎಚ್.ಕೆ. ಸಿದ್ಧಗಂಗಯ್ಯ, 'ಸಂಸ್ಕೃತಭಾಷಾಶಾಸ್ತ್ರ ಮತ್ತು ಸಾಹಿತ್ಯಚರಿತ್ರೆ' ಕರ್ನಾಟಕಸರ್ಕಾರ, ಪಠ್ಯಪುಸ್ತಕಗಳ ಇಲಾಖೆ 1976.

14. ಕೆಂಪೇಗೌಡ ಕೆ, 'ಭಾಷೆ ಸಮಾಜ ಸಂಸ್ಕೃತಿ', ಲೇಖಕ ಪ್ರಕಾಶಕ, ಸರಸ್ವತಿಪುರಂ, ಮೈಸೂರು, 2009.

15. ಕೃಷ್ಣಸ್ವಾಮಿ ಕೆ. ಆರ್(ಸಂ), 'ಆದಿಚುಂಚನಗಿರಿ', ಜನಪದ ಗೀತೆಗಳ ಸಂಗ್ರಹ ಶ್ರೀ ಆದಿಚುಂಚನಗಿರಿ ಕ್ಷೇತ್ರ, 2008.

16. ಗಂಗಾಧರಶಾಸ್ತ್ರೀ ಹೆಚ್(ಅನು), 'ಶಿವರಹಸ್ಯ'(ಮೂಲ), ಸಂಪುಟ. 16, ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು, 1948.

17. ಗೋವಿಂದಯ್ಯ ಟಿ, 'ಕಲಿಯುಗದ ಕರ್ಮಯೋಗಿ ಸನಾತನ ಧಾರ್ಮಿಕ ನಭೋಮಂಡಲದ ಧ್ರುವತಾರೆ ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮೀಜಿ', ವಿಜಯದಶಮಿ, ವಿಜಯನಗರ, ಬೆಂಗಳೂರು, 2008.

18. ಚಿನ್ನಪ್ಪಗೌಡ ಕೆ (ಸಂ), 'ಗೌಡ ಜನಾಂಗ ಇತಿಹಾಸ ಮತ್ತು ಸಂಸ್ಕೃತಿ', ಬೆಳ್ಳಿಹಬ್ಬ ಆಚರಣಾ ಸಮಿತಿ, ಒಕ್ಕಲಿಗರ ಸಂಘ, ಮಂಗಳೂರು, 2003.

19. ಚೆನ್ನಬಸಪ್ಪ ಗೊ.ರು(ಸಂ), 'ಗಿರಿನವಿಲು', 'ರಾಜ್ಯಮಟ್ಟದ ಮೂರನೇ ಮಕ್ಕಳ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ', ಆದಿಚುಂಚನಗಿರಿ ಕ್ಷೇತ್ರ , 1988.

20. ಡಿ.ವಿ.ಜಿ. 'ಸಂಸ್ಕೃತಿ' ಕಾವ್ಯಾಲಯ, ಪ್ರಕಾಶಕರು ಮೈಸೂರು, 1953.

21. ಡಿ.ವಿ.ಜಿ, 'ಸಂಸ್ಕೃತಿ', ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, 2015.

22. ತಮ್ಮಣ್ಣಗೌಡ ಎನ್(ಸಂ), 'ವಿಶ್ವಚೇತನ', ಶ್ರೀ ಆದಿಚುಂಚನಗಿರಿ ಶಾಖಾಮಠ, ವಿಶ್ವಮಾನವ ಕ್ಷೇತ್ರ, ಮಂಡ್ಯ ಜಿಲ್ಲೆ, 2018.

23. ತಿಪ್ಪೇರುದ್ರಸ್ವಾಮಿ ಎಚ್, 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ', ಡಿ.ವಿ.ಕೆ. ಮೂರ್ತಿ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು, 1968.

24. ದೊಡ್ಡರಂಗೇಗೌಡ, ಕೆ.ರಾಜೇಶ್ವರಿ ಗೌಡ, 'ಆದಿಚುಂಚನಗಿರಿಯ ಅಭಿನವ ವಿವೇಕಾನಂದ', ಶ್ರೀ ಆದಿಚುಂಚನಗಿರಿ ಕ್ಷೇತ್ರ, ಮಂಡ್ಯ ಜಿಲ್ಲೆ, 1994.

25. 'ದಕ್ಷಿಣ ಕಾಶಿ ತ್ರಿವೇಣಿ ಸಂಗಮ ಮಹಾಕುಂಭಮೇಳ' ಶ್ರೀ ಆದಿಚುಂಚನಗಿರಿ ಶಾಖಾಮಠ, ಮೈಸೂರು, 1992.